# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 Volume:02 • ಸಂಚಿಕೆ: 61 Issue: 61 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 30.08.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು
ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು
ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com


**ಮೈಕ್ರೋ ನ್ಯೂಸ್**

## 2ನೇ ಅಪರ ಸರ್ಕಾರಿ ವಕೀಲರ ಹುದ್ದೆಗೆ ನೇಮಕಾತಿ ಅಧಿಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ 2ನೇ ಅಪರ ಸರ್ಕಾರಿ ವಕೀಲರ ಹುದ್ದೆಗೆ ಕರ್ನಾಟಕ ಕಾನೂನು ಅಧಿಕಾರಿಗಳು (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(3) ರಡಿ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಧಿಸೂಚನೆ ಸಂಖ್ಯೆ: ಲಾ–ಎಲ್ ಎಡಿ/01/2024, ದಿನಾಂಕ: 01.01.2024 ರಂತೆ ನೇಮಕಾತಿ ಮಾಡಲಾಗಿದ್ದು, ಪ್ರಸ್ತುತ ಸದರಿ ಹುದ್ದೆಗೆ ನೇಮಕಾತಿ ಮಾಡಲು ಕಾನೂನು ಇಲಾಖೆಯ ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 5 ಮತ್ತು 26(2) ಹಾಗೂ 12 (ಎ) (ಬಿ) ಮತ್ತು (ಸಿ) ರನ್ವಯ ನೇಮಕಾತಿ ಮಾಡಲು ಏಳು (07) ವರ್ಷಗಳ ಕಾಲ ವಕೀಲ ವೃತ್ತಿ ಪೂರೈಸಿದ ಅರ್ಹ ವಕೀಲರು ತಮ್ಮ ಪೂರ್ಣ ವೈಯಕ್ತಿಕ ಹಾಗೂ ಸೇವಾ ವಿವರಗಳೊಂದಿಗೆ ಲಿಖಿತ ಅರ್ಜಿಯನ್ನು (ನಿಗದಿತ ನಮೂನೆಯಲ್ಲಿ) ದ್ವಿಪ್ರತಿಯಲ್ಲಿ ಜಿಲ್ಲಾಧಿಕಾರಿ ವಿಜಯನಗರ ಇವರ ಕಾರ್ಯಾಲಯ ಕಚೇರಿಯ ಸಮಯದಲ್ಲಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಸೆಪ್ಟೆಂಬರ್ 11ರ ಸಂಜೆ 5.30ರೊಳಗೆ ಸಲ್ಲಿಸಬಹುದಾಗಿದೆ.

## ಐದು ವಿಧಾನಸಭಾ ಕ್ಷೇತ್ರ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ-2025 ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ–2025 ಪ್ರಕ್ರಿಯೆಯು ವಿಜಯನಗರ ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳ ಒಟ್ಟು 1234 ಮತಗಟ್ಟೆ ಕೇಂದ್ರಗಳಲ್ಲಿ ಆಗಸ್ಟ್ 20ರಿಂದ ಪ್ರಾರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ತಿಳಿಸಿದ್ದಾರೆ. ಪೂರ್ವ ಪರಿಷ್ಕರಣೆ ಚಟುವಟಿಕೆ ಸಮಯದಲ್ಲಿ ಜಿಲ್ಲೆಯ ಎಲ್ಲಾ ಮತಗಟ್ಟೆ ಮಟ್ಟದ >>4

# ಗಣಪತಿ ಸುಗಮ ಸಂಚಾರಕ್ಕೆ ಗುಂಡಿ ಮುಚ್ಚಿ

## ಶಾಂತಿ ಸಹಬಾಳ್ವೆಯ ಸಂಕೇತವಾಗಲಿ ಗೌರಿ ಗಣೇಶ, ಈದ್ ಮಿಲಾದ್ ಹಬ್ಬ

## ಅಧಿಕಾರಿಗಳ ಸಭೆಯಲ್ಲಿ ಡಿಸಿ ದಿವಾಕರ, ಎಸ್ಪಿ ಶ್ರೀಹರಿಬಾಬು ಸೂಚನೆ





**ಹಂಪಿ ಟೈಮ್ಸ್ ಹೊಸಪೇಟೆ**

ಗೌರಿ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಹಬ್ಬಗಳ ಸಂದರ್ಭದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹಿನ್ನೆಲೆಯಲ್ಲಿ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಬಿ.ಎಲ್. ಅವರು ಗುರುವಾರ ಅಧಿಕಾರಿಗಳ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆಯು ಐತಿಹಾಸಿಕ ವಿಶೇಷತೆಯನ್ನು ಹೊಂದಿದೆ. ಇಲ್ಲಿ ಎಲ್ಲ ಧರ್ಮದವರು ಶಾಂತಿ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಅದೇ ರೀತಿ ಗೌರಿ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಹಬ್ಬಗಳ ಸಂದರ್ಭದಲ್ಲಿ ಪ್ರತಿಯೊಬ್ಬರು ಶಾಂತಿ ಸಹಬಾಳ್ವೆಯಿಂದ ಹಬ್ಬ ಆಚರಿಸುವಂತೆ ಸುವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾತನಾಡಿ, ಗೌರಿ ಗಣೇಶ ಹಬ್ಬ ಮತ್ತು ಈದ್ ಮಿಲಾದ್ ಹಬ್ಬಗಳ ಹಿನ್ನೆಲೆಯಲ್ಲಿ ಸರ್ಕಾರವು ಸಾರ್ವಜನಿಕರ ಹಿತದೃಷ್ಟಿಯಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯಲ್ಲಿ ತಿಳಿಸಿದ ಮಾರ್ಗಸೂಚಿಯನುಸಾರ ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು. ಹಬ್ಬದ ಸಂದರ್ಭದಲ್ಲಿ ಯಾವುದೇ ಕಡೆಗಳಲ್ಲಿ ಅವಘಡಗಳು ಸಂಭವಿಸದ ಹಾಗೆ ಮುಂಜಾಗ್ರತೆ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಬ್ಬದ ಸಂದರ್ಭದಲ್ಲಿ ನಿರಂತರ ವಿದ್ಯುತ್ ಸರಬರಾಜಿಗೆ ವ್ಯವಸ್ಥೆ ಮಾಡಲು ಮತ್ತು ಅಲ್ಲಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವಂತೆ ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.

ಹಬ್ಬದ ಹಿನ್ನೆಲೆಯಲ್ಲಿ ನಗರದ ಸೌಂದರ್ಯೀಕರಣಕ್ಕೆ ಅಗತ್ಯ ಏರ್ಪಾಡು ಮಾಡಬೇಕು. ಎಲ್ಲಾ ಕಡೆಗೆ ರಸ್ತೆಗಳು ಸರಿ ಇರುವ ಹಾಗೆ ನೋಡಿಕೊಳ್ಳಬೇಕು. ರಸ್ತೆಯಲ್ಲಿನ ತಗ್ಗು ಗುಂಡಿಗಳನ್ನು ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಹಬ್ಬದ ಹಿನ್ನೆಲೆಯಲ್ಲಿ ಅನುಮತಿ ಪಡೆದುಕೊಂಡೇ ಬ್ಯಾನರ್ ಅಳವಡಿಸುವಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಮತ್ತು ಗಣಪತಿ ವಿಗ್ರಹಗಳ ವಿಸರ್ಜನೆ ಸ್ಥಳದಲ್ಲಿ ನುರಿತ ಈಜುಪಟುಗಳು ಇರುವಂತೆ ನೋಡಿಕೊಳ್ಳಲು ನಗರಸಭೆ ಪೌರಾಯುಕ್ತರಿಗೆ ಸೂಚಿಸಲಾಯಿತು.

- ಬ್ಯಾನರ್ ಅಳವಡಿಕೆ ಅನುಮತಿ ಕಡ್ಡಾಯ
- ನಿರಂತರ ವಿದ್ಯುತ್ ಸರಬರಾಜು
- ನಗರದ ಸೌಂದರ್ಯೀಕರಣ
- ಪರಿಸರ ಸ್ನೇಹಿ ಗಣಪತಿ ಪ್ರತಿಷ್ಠಾಪಿಸಿ
- ಪಿಓಪಿಯ ವಿಗ್ರಹ ಬಳಸಿದರೆ ಕ್ರಮ

ಹಬ್ಬದ ಸಂದರ್ಭದಲ್ಲಿ ಪರಿಸರ ಸ್ನೇಹಿ ಗಣಪತಿ ವಿಗ್ರಹಗಳನ್ನು ಪ್ರತಿಸ್ಥಾಪಿಸುವಂತಾಗಬೇಕು. ಈ ನಿಟ್ಟಿನಲ್ಲಿ ಯಾರಾದರು ಪಿಓಪಿಯ ವಿಗ್ರಹಗಳನ್ನು ಬಳಸಿದರೆ ಈ ಬಗ್ಗೆ ಮಾಹಿತಿ ನೀಡಬೇಕು ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಸೂಚಿಸಲಾಯಿತು.

ಗಣಪತಿ ವಿಗ್ರಹಗಳ ವಿಸರ್ಜನೆ ವೇಳೆ ಯಾವುದೇ ರೀತಿಯ ಅವಘಡಗಳು ಆಗದಂತೆ ಆಯಾ ಮಾರ್ಗಗಳಲ್ಲಿ ಬಾಗಿರುವ ಗಿಡಗಳ ಟೊಂಗೆಗಳನ್ನು ತೆರವುಗೊಳಿಸಬೇಕು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಯಿತು.

ಗಣಪತಿ ವಿಸರ್ಜನೆಗೆ ಅನುಕೂಲವಾಗುವಂತೆ ಗಣಪತಿ ವಿಗ್ರಹಗಳು ಸಂಚರಿಸುವ ಎಲ್ಲ ರಸ್ತೆಗಳನ್ನು ಸುಸಜ್ಜಿತವಾಗಿ ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಹಬ್ಬದ ಸಂದರ್ಭದಲ್ಲಿ ಯಾವುದೇ ಕಡೆಗಳಲ್ಲಿ ಬೆಂಕಿ ಅವಘಡಗಳು ಸಂಭವಿಸಿದಂತೆ ಸಾಕಷ್ಟು ಮುಂಜಾಗ್ರತೆ ವಹಿಸಬೇಕು ಎಂದು ಅಗ್ನಿಶ್ಯಾಮಕ ಠಾಣೆಯ ಅಧಿಕಾರಿಗಳಿಗೆ ತಿಳಿಸಲಾಯಿತು.

ಸಭೆಯಲ್ಲಿ ಡಿವೈಎಸ್ಪಿ ಟಿ.ಮಂಜುನಾಥ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಣ್ಣ ಲಾಳಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ, ನಗರಸಭೆ ಪೌರಾಯುಕ್ತ ಚಂದ್ರಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

## ಅಮಿತ್ ಸ್ವಾವಲಂಬಿ ಬದುಕಿಗೆ ಆಸರೆಯಾದ ಆರೋಗ್ಯ ಇಲಾಖೆ

### ಟುವ್ಹಿಲರ್ ಮತ್ತು ವಾಹನ ವಾಶಿಂಗ್‌ಗೆ 50 ಸಾವಿರ ಮೌಲ್ಯದ ಯಂತ್ರ ವಿತರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಕೂಡ್ಲಿಗಿ ತಾಲೂಕಿನ ಶಿವಪುರಗ್ರಾಮದಲ್ಲಿ ಕುಷ್ಠರೋಗ ಮುಕ್ತ ಅಮಿತ್ ಇವರಿಗೆ ಸ್ವಯಂ ಕೆಲಸ ಮಾಡಿ ಜೀವನ ಸಾಗಿಸಲು ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಡಿಮೆನ್ ಫೌಂಡೇಶನ್ ವತಿಯಿಂದ 50 ಸಾವಿರ ಬೆಲೆಬಾಳುವ ಟುವಿಲ್ ಬೈಕ್ ಮತ್ತು ವಾಹನ ವಾಟರ್ ವಾಶ್ ಮಾಡವ ಯಂತ್ರವನ್ನು ಗುರುವಾರ ನೀಡಲಾಯಿತು. ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ. ಡಾ.ವಿನಯ್ ಎಂ. ಮತ್ತು ಡ್ಯಾಮಿನ್ ಫೌಂಡೇಶನ್ ಸಂಯೋಜಕರಾದ ಸುಧಾಕರ ಮತ್ತು ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡಮನಿ, ಅರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಮತ್ತು ಹುಲಗಪ್ಪ ಸಾರ್ವಜನಿಕರು ಇದ್ದರು.



## ಸಂಗೀತ ಹಿರೇಮಠಗೆ ಚಿನ್ನದ ಪದಕ

### ಎಂ.ಎ. ಮ್ಯೂಸಿಕ್‌ನಲ್ಲಿ 4ನೇ ರ್‍ಯಾಂಕ್



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಸಂಗೀತ ಹಿರೇಮಠ ಅವರು ಎಂ.ಎ.ಮ್ಯೂಸಿಕ್‌ನಲ್ಲಿ ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ನಾಲ್ಕನೇ ರ್‍ಯಾಂಕ್ ಪಡೆದಿದ್ದಾರೆ. ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಕಳೆದ ಸಾಲಿನಲ್ಲಿ ನಡೆಸಿದ ಎಂ. ಎ. ಮ್ಯೂಸಿಕ್ ಪರೀಕ್ಷೆಯಲ್ಲಿ ಹುಬ್ಬಳ್ಳಿಯ ಎಸ್. ಜೆ. ಎಂ. ವಿ. ಎಸ್. ಕಲಾ ಹಾಗೂ ವಾಣಿಜ್ಯ ಮಹಿಳಾ ವಿದ್ಯಾಲಯದ ವಿದ್ಯಾರ್ಥಿನಿಯಾಗಿ ಪರೀಕ್ಷೆ ಬರೆದಿದ್ದರು. ಸಂಗೀತ ಹಿರೇಮಠ್ ಅವರಿಗೆ ಆಗಸ್ಟ್ 27 ರಂದು ನಡೆದ ಕಾಲೇಜಿನ 56 ನೇ ವಾರ್ಷಿಕೋತ್ಸವದಲ್ಲಿ ಪೂಜ್ಯ ಶ್ರೀಗಳಾದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಡಾ. ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಪ್ರೊ . ಟಿ. ಎಂ.ಭಾಸ್ಕರ್ ರವರು ಚಿನ್ನದ ಪದಕ ನೀಡಿ ಸನ್ಮಾನಿಸಿದರು.

# ಸೆಲ್ಲರ್‌ಗಳ ಮಾಲೀಕರ ವಿರುದ್ಧ ಕ್ರಮಕ್ಕೆ ಕರವೇ ಅಗ್ರಹ

## ರಸ್ತೆಯಲ್ಲೇ ವಾಹನ ನಿಲುಗಡೆ ಹೆಚ್ಚಿದ ಟ್ರಾಫಿಕ್ ಕಿರಿಕಿರಿ

### ವಾಹನ ನಿಲುಗಡೆಗಾಗಿ ನಿರ್ಮಿಸಿದ ಸೆಲ್ಲರ್‌ನಲ್ಲಿ ಈಗ ಬಾಡಿಗೆ ಮಳಿಗೆಗಳು | ವರಮಾನದತ್ತ ಮುಖಮಾಡಿದ ಕಟ್ಟಡ ಮಾಲೀಕರು

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ಅವಕಾಶ ನೀಡದೆ, ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆ ನೀಡುವ ಮೂಲಕ ಟ್ರಾಫೀಕ್ ಜಾಮ್ ಸೃಷ್ಟಿಸುತ್ತಿರುವ ಕಟ್ಟಡ ಮಾಲೀಕರ ವಿರುದ್ಧ ಸೂಕ್ತ ಕ್ರಮಜರುಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ಗುರುವಾರ ನಗರಸಭೆ ಪೌರಯುಕ್ತರಿಗೆ ಮನವಿ ಸಲ್ಲಿಸಿತು.

ಕರವೇ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ ಮಾತನಾಡಿ, ನಗರದ ಪ್ರಮುಖ ರಸ್ತೆಗಳ ಪಕ್ಕದಲ್ಲಿನ ಬೃಹತ್ ಕಟ್ಟಡಗಳು ವಾಹನ ಪಾರ್ಕಿಂಗ್‌ಗಾಗಿ ಪರವಾನಗಿ ಪಡೆದು ನೆಲ ಮಹಡಿ ನಿರ್ಮಿಸಿಕೊಂಡಿದ್ದರೂ, ಅದರ ಮಾಲೀಕರು ವಾಹನಗಳ ಪಾರ್ಕಿಂಗ್‌ಗೆ ಅವಕಾಶ ನೀಡದೆ ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆ



ನೀಡಿದ್ದರಿಂದ ರಸ್ತೆಗಳಲ್ಲಿ ನಿತ್ಯ ಭಾರೀ ಟ್ರಾಫಿಕ್ ಜಾಮ್ ಆಗುತ್ತಿದೆ. ಟ್ರಾಫೀಕ್ ಜಾಮ್‌ನಿಂದಾಗಿ ಸಾರ್ವಜನಿಕರು ಕಿರಿಕಿರಿ ಅನುಭವಿಸುತ್ತಿದ್ದು, ಪ್ರಮುಖ ರಸ್ತೆಗಳಲ್ಲಿ ಸಂಚರಿಸುವುದು ದುಸ್ತರವಾಗಿದೆ. ವಾಹನಗಳ ನಿಲುಗಡೆಗಾಗಿಯೇ ಸೆಲ್ಲರ್‌ಗೆ ಪರವಾನಿಗೆ ಪಡೆದು ಮಳಿಗೆ ನಿರ್ಮಿಸಿಕೊಂಡು ಬಾಡಿಗೆ ನೀಡುತ್ತಿದ್ದಾರೆ. ಕೂಡಲೇ ನಿಯಮ ಪಾಲಿಸದ ಕಟ್ಟಡದ ಮಾಲೀಕರಿಗೆ ನೋಟೀಸ್ ಜಾರಿಗೊಳಿಸಿ, ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಬೇಕು. ಸೆಲ್ಲರ್‌ಗಳಲ್ಲಿ ನಿರ್ಮಿಸಿ ಕೊಂಡಿರುವ ಮಳಿಗೆಗಳಲ್ಲು ತೆರವುಗೊಳಿಸಿ, ಜಾಗದ ಮಾಲೀಕರ ಮೇಲೆ ಶಿಸ್ತುಕ್ರಮ ಜರುಗಿಸ ಬೇಕೆಂದು ಒತ್ತಾಯಿಸಿದರು. ಸಂಘಟನೆಯ ಸಾಮಾಜಿಕ ಜಾಲತಾಣ ಜಿಲ್ಲಾಧ್ಯಕ್ಷ ಎಸ್.ಎಂ.ಜಾಫರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಹೆಚ್.ಶ್ರೀನಿವಾಸ್, ಕರವೇ ಕಾರ್ಯಕರ್ತರು ಇದ್ದರು.

## ಮತ್ತೆ ತುಂಬಲಿರುವ ತುಂಗಭದ್ರೆ



**ಹೊಸಪೇಟೆ ತುಂಗಭದ್ರಾ ಡ್ಯಾಂ ಭರ್ತಿಗೆ 4 ಅಡಿ ನೀರು ಬಾಕಿ ಇದ್ದು, ಪ್ರಸ್ತುತ 90 ಟಿಎಂಸಿ ನೀರಿದೆ. 30,919 ಕ್ಯುಸೆಕ್ ಒಳಹರಿವಿದ್ದು ಮುಂದಿನ 10 ದಿನದಲ್ಲಿ ಭರ್ತಿಯಾಗುವ ನಿರೀಕ್ಷೆ ಹೆಚ್ಚಿಸಿದೆ ಎಂದು ಡಿಸಿ ದಿವಾಕರ ತಿಳಿಸಿದ್ದಾರೆ.**

## ವಿಜ್ಞಾನ

# ಚಳಿಗಾಲದಲ್ಲಿ ಚರ್ಮ ಏಕೆ ಬಿರಿಯುತ್ತದೆ?

■ ಆರ್.ಬಿ.ಗುರುಬಸವರಾಜ

"ಅಪ್ಪಾ ವ್ಯಾಸಲೀನ್ ತರಲು ದುಡ್ಡು ಬೇಕಿತ್ತು" ಎಂದು ಅಳುಕುತ್ತಲೇ ಕೇಳಿದಳು ರೇಖಾ. 'ಅಲ್ಲಮ್ಮ ಒಂದು ವಾರದ ಹಿಂದೆ ತಂದಿತ್ತಲ್ಲ, ಅಲ್ಲೇ ಎಲ್ಲೆ ಇರಬೇಕು ಹುಡುಕಿನೋಡು' ಎಂದರು ತಂದೆ. "ಹೌದಪ್ಪ, ಅದು ಖಾಲಿಯಾಗಿದೆ" ಎಂದಳು. 'ಏನು! ಇಷ್ಟು ಬೇಗನೇ ಖಾಲಿಯಾಯ್ತಾ? ಎಂದು ರೇಗಿದರು. "ಹ್ಞೂಂ ಪಪ್ಪಾ, ಖಾಲಿಯಾಗಿದೆ. ಚಳಿಗಾಲವಾದ್ದರಿಂದ ಮನೇಲಿ ಎಲ್ಲರೂ ಬಳಸ್ತಾರೆ. ಹಾಗಾಗಿ ಖಾಲಿಯಾಗಿದೆ" ಎಂದಳು. 'ಅಯ್ಯೋ ಹೀಗಾದರೆ ನಾನು ಎಷ್ಟು ಅಂತ ತರಲಿ' ಎಂದು ಗೊಣಗುತ್ತಾ ಹಣ ನೀಡಿದರು. ಅಮ್ಮನ ಬಳಿ ತೆರಳಿದ ರೇಖಾ "ಅಮ್ಮಾ ಚಳಿಗಾಲದಲ್ಲಿ ಚರ್ಮ ಏಕೆ ಬಿರಿಯುತ್ತದೆ?" ಎಂದಳು. 'ಅದನ್ನು ನಿಮ್ಮ ಪಪ್ಪನ ಬಳಿ ಕೇಳು. ನನಗೆ ಅದರ ಬಗ್ಗೆ ತಿಳಿದಿಲ್ಲ' ಎಂದಳು ತಾಯಿ. ಪುನಹ ತಂದೆಯ ಬಳಿ ಬಂದು ಅದೇ ಪ್ರಶ್ನೆ



ಕೇಳಿದಳು. ಮಗಳ ಪ್ರಶ್ನೆಗೆ ತಂದೆ ಉತ್ತರಿಸುತ್ತಾ ಕೂತರು.

ಚಳಿಗಾಲದ ತಿಂಗಳುಗಳಲ್ಲಿ ವಾತಾವರಣದಲ್ಲಿ ಆರ್ದ್ರತೆಯ ಮಟ್ಟವು ಕಡಿಮೆಯಾಗಿರುತ್ತದೆ ಮತ್ತು ಗಾಳಿಯು ಶುಷ್ಕವಾಗಿರುತ್ತದೆ. ಇದು ಚರ್ಮವು ನೈಸರ್ಗಿಕ ತೇವಾಂಶ ವನ್ನು ಕಳೆದುಕೊಳ್ಳುವಂತೆ ಮಾಡು ತ್ತದೆ. ಚಳಿಗಾಲದಲ್ಲಿ ಚರ್ಮವು ಶುಷ್ಕ ಮತ್ತು ನಿರ್ಜಲೀಕರಣಕ್ಕೆ ಒಳಗಾಗುತ್ತದೆ. ಪರಿಣಾಮವಾಗಿ ಚರ್ಮವು ತುರಿಕೆ ಮತ್ತು ಬಿರುಕುಗಳಿಗೆ ಒಳಗಾಗಬಹುದು.

ಇದಲ್ಲದೆ ಚಳಿಗಾಲದಲ್ಲಿ ಹೆಚ್ಚಿನ ಜನರು ಬಿಸಿ ನೀರಿನಿಂದ ಸ್ನಾನ ಮಾಡಲು ಒಲವು ತೋರುತ್ತಾರೆ. ಬಿಸಿನೀರಿನ ಸ್ನಾನವು ಚರ್ಮದ ನೈಸರ್ಗಿಕ ತೈಲಗಳನ್ನು ತೆಗೆದುಹಾಕುತ್ತದೆ. ಇದೂ ಸಹ ಚರ್ಮದ ಶುಷ್ಕತೆ ಮತ್ತು ಬಿರುಕುಗಳಿಗೆ ಕಾರಣವಾಗುತ್ತದೆ. ಅಲ್ಲದೆ ಚಳಿಗಾಲದಲ್ಲಿ ಬಳಸುವ ಸಾಬೂನು ಮತ್ತು ಮಾರ್ಜಕಗಳೂ ಸಹ ಚರ್ಮ ಬಿರಿಯುವಿಕೆಗೆ ಕಾರಣವಾಗಿವೆ.

ಇದಲ್ಲದೆ ಕೈಗಳು, ಪಾದಗಳು ಮತ್ತು ತುಟಿಗಳಂತಹ ದೇಹದ ಕೆಲವು ಭಾಗಗಳ ಚರ್ಮವು ತೆಳ್ಳಗಿರುತ್ತದೆ ಮತ್ತು ದೇಹದ ಇತರ ಭಾಗಗಳಿಗಿಂತ ಕಡಿಮೆ ತೈಲ ಗ್ರಂಥಿಗಳನ್ನು ಹೊಂದಿರುತ್ತವೆ. ಪರಿಣಾಮವಾಗಿ ಈ ಭಾಗಗಳ ಚರ್ಮವು ಹೆಚ್ಚು ಶುಷ್ಕತೆ ಮತ್ತು ಬಿರುಕುಗಳಿಗೆ ಒಳಗಾಗುತ್ತವೆ. ಅಲ್ಲದೇ ಬಹುತೇಕ ಜನರು ಚಳಿಗಾಲದಲ್ಲಿ ಹೆಚ್ಚು ನೀರು ಕುಡಿಯದಿರುವುದೂ ಸಹ ಒಣ ತ್ವಚೆಗೆ ಕಾರಣವಾಗಿದೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಅಮ್ಮನಿಗೆ ವಯಸ್ಸಾಯ್ತು



ಪ್ರೀತಿಯ ಪುಟ್ಟ, ನಿನ್ನಮ್ಮನಿಗೆ ವಯಸ್ಸಾಯ್ತು ಕಣೋ, ಆಕೆಯ ಪ್ರಖರ ಕಣ್ಣುಗಳೀಗ ತನ್ನ ಹೊಳಪು ಕಳೆದುಕೊಂಡು ಮಂದವಾಗಿವೆ. ಬಲಿಷ್ಠ ಕಾಲುಗಳು, ಪಾದಗಳು ದಣಿದಿದ್ದು ಮೊದಲಿನಷ್ಟು ಸಲೀಸಾಗಿ ಓಡಾಡಲು ಸಾಧ್ಯವಾಗುವುದಿಲ್ಲ. ಒಮ್ಮೊಮ್ಮೆ ಕುಳಿತಲ್ಲೇ ಕುಳಿತು ಎದ್ದ ಕೂಡಲೇ ನಡೆಯಲಾಗುವುದಿಲ್ಲ.

ಈಗ ಆಕೆಗೆ ನಿನ್ನ ಪ್ರೀತಿ ಪೂರ್ವಕ ಕಾಳಜಿಯ ಅವಶ್ಯಕತೆ ಇದೆ. ತೆರೆದ ಹೃದಯ ಮತ್ತು ಮಾಸದ ಮುಗುಳ್ನಗೆಯೊಂದಿಗೆ ಆಕೆಯನ್ನು ಅಪ್ಪಿಕೊಂಡು ಬಿಡು. ಇನ್ನೆಷ್ಟು ಕಾಲ ಆಕೆ ನಿನ್ನೊಂದಿಗಿರುತ್ತಾಳೆ. ಆಗ ಭಾರವಾದ ಮನಸ್ಸು ಮತ್ತು ಹೃದಯದೊಂದಿಗೆ ಆಕೆಯನ್ನು ನೀನು ಬೀಳ್ಕೊಡಲೇಬೇಕು.

ಆಕೆ ನಿನಗೆ ಅದೆಷ್ಟೇ ಪ್ರಶ್ನೆಗಳನ್ನು ಕೇಳಲಿ ಸಮಾಧಾನದಿಂದ ಉತ್ತರಿಸುವ ಮನವಿರಲಿ. ನಿನ್ನ ಚಿಕ್ಕಂದಿನಲ್ಲಿ ನಿನ್ನೆಲ್ಲ ತಲೆ ಹರಟೆಗಳಿಗೆ, ಒಂದರ ಮೇಲೊಂದರಂತೆ ಎಸೆಯುವ ಪ್ರಶ್ನೆಗಳಿಗೆ ಆಕೆ ಅದೆಷ್ಟು ಸಮಾಧಾನದಿಂದ ಉತ್ತರಿಸಿದ್ದಳು, ಗೊತ್ತೇ! ಶಾಂತಿ, ಸಮಾಧಾನ ಮತ್ತು ಸಹನೆಯಿಂದ ಆಕೆಯೊಂದಿಗೆ ವರ್ತಿಸು... ನಿನ್ನ ಪ್ರೀತಿಯ ಮತ್ತು ತಾಳ್ಮೆಯ ಉತ್ತರಗಳು ಆಕೆಗೆ ಒಳ್ಳೆಯ ಅನುಭೂತಿಯನ್ನು ಈ ಸಮಯದಲ್ಲಿ ಕೊಡಬಲ್ಲವು.

ಆಕೆಗೆ ಕಿವಿಯಷ್ಟೇ ಮಂದವಾಗಿಲ್ಲ, ಬುದ್ಧಿಯು ಕೂಡ ತನ್ನ ಮುಂಚಿನ ತೀಕ್ಷ್ಣತೆಯನ್ನು ಕಳೆದುಕೊಂಡಿದೆ, ಆದ್ದರಿಂದ ನೀನು ಹೇಳುವುದು ಆಕೆಗೆ ಬೇಗ ಅರ್ಥವಾಗದಿರಬಹುದು... ಎಳೆ ಮಗುವಿಗೆ ಹೇಳುವಂತೆ ಆಕೆಗೆ ನಿಧಾನವಾಗಿ ತಿಳಿಸಿ ಹೇಳು, ನಿನ್ನೊಂದು ಪ್ರೀತಿಯ ಸ್ಪರ್ಶ ಆಕೆಯ ಇಡೀ ದಿನವನ್ನು ಸುಂದರವಾಗಿಸುವಂತೆ ನಡೆದುಕೋ. ಅದೊಂದು ದಿನ ನೀನು ಅದೆಷ್ಟೇ ಆಕೆಯ ಪ್ರಶ್ನೆಗಾಗಿ ಕಾದರೂ ಆಕೆ ಮೌನವನ್ನು ಹೊದ್ದು ಮತ್ತೆಂದು ಏಳದಂತಹ ಚಿರನಿದ್ದೆಗೆ ಜಾರಬಹುದು.

ಹಳೆಯ ಹಲವಾರು ವಿಷಯಗಳನ್ನು ಮೆಲು ದನಿಯಲ್ಲಿ ಸವಿಸ್ತಾರವಾಗಿ ನೆನಪಿಸಿಕೊಂಡು ಹೇಳುವ ಆಕೆ ತನ್ನ ಕನ್ನಡಕ, ಊರುಗೋಲುಗಳನ್ನು ಎಲ್ಲಿಟ್ಟಿದ್ದಾಳೆ ಎಂಬುದನ್ನು ಮರೆತು ತಡಕಾಡಬಹುದು. ಹಲ್ಲಿನ ಸೆಟ್ಟು ಹುಡುಕಬಹುದು. ಆಕೆ ಗಾಬರಿಯಿಂದ ಹುಡುಕುವಾಗ ನಿನಗೆ ಇದೇನು ದೊಡ್ಡ ವಿಷಯ ಎಂದು ತೋರಬಹುದು. ಬದುಕಿನ ಇಳಿಸಂಜೆಯಲ್ಲಿ ಆಕೆಗೆ ಜಗತ್ತನ್ನು ನೋಡಲು, ಹೆಜ್ಜೆ ಕಿತ್ತಿಡಲು, ಜೀವನದ ಸವಿ ಸವಿಯಲು ಇವುಗಳೇ ಮುಖ್ಯ ಎಂದು ಹರೆಯದ ನಿನಗೆ ಹೇಗೆ ಅರ್ಥವಾಗಬೇಕು? ಮುಂದೊಂದು ದಿನ ಆಕೆ ಅಳಿದರೂ ಆಕೆಯ ಈ ವಸ್ತುಗಳು ನಿನ್ನ ಮನೆಯ ಯಾವುದೋ ಒಂದು ಮೂಲೆಯಲ್ಲಿ ತಮ್ಮ ಒಡತಿಯ ನೆನಪು ಮೂಡಿಸಬಹುದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆಕೆ ಊಟವನ್ನು ನಿಧಾನವಾಗಿ ಮಾಡುವುದು ನಿನ್ನ ಪತ್ನಿಗೆ ರೇಜಿಗೆ ಹುಟ್ಟಿಸಬಹುದು, ಕಟ್ಟಿಸಿದ ಹಲ್ಲುಗಳು ಆಹಾರವನ್ನು ನುರಿಸಬಹುದೇ ಹೊರತು ಸ್ವಾದವನ್ನು ನೀಡುವುದಿಲ್ಲ. ನೀ ಚಿಕ್ಕವನಿದ್ದಾಗ ಆಕೆ ನಿನಗೆ ತಿನ್ನಿಸಿದಾಗ ಒಂದೊಂದು ತುತ್ತನ್ನು ಪುರ್ ಎಂದು ಬಾಯಿಯಿಂದ ಹೊರಗೆ ತಳ್ಳುತ್ತಿದ್ದ ನಿನ್ನಾಟವನ್ನು ನಗುತ್ತಲೇ ಆಕೆ ಸಹಿಸಿಕೊಂಡಿದ್ದಲ್ಲವೇ, ತನ್ನ ಜೀವನದ ಬಹು ಮುಖ್ಯ ಸಮಯವನ್ನು ನಿನಗೆ ಊಟ ಮಾಡಿಸುವುದರಲ್ಲಿ ಕಳೆದಿದ್ದಳಲ್ಲವೇ? ಸ್ವತಹ ತಾನು ಹಸಿದಿದ್ದರೂ ನಿನ್ನ ಹಸಿವಿಂಗಿಸಲು ಕಾತರಿಸಿ ಕಳವಳಿಸಿದಾಕೆ ಆಕೆಯೇ ಅಲ್ಲವೇ? ದಿನದ ಒಂದು ಹೊತ್ತು ನೀ ಉಣ್ಣದೇ ಹೋದಾಗ ಗಾಬರಿಗೊಂಡು ವೈದ್ಯರ ಬಳಿ ಓಡಿದಾಕೆ ಅಲ್ಲವೇ! ಹೊತ್ತು ಹೊತ್ತಿಗೆ ನಿನಗೆ ಮಾಡಿ ಹಾಕಿದ್ದಲ್ಲದೆ ಶಾಲೆಗೆ ಹೋಗುವ ತನ್ನ ಮಗ ಚೆನ್ನಾಗಿ ತಿಂದುಂಡು ಇರಲೆಂದು ವಿವಿಧ ಬಗೆಯ ಆಹಾರ ಸಿದ್ಧ ಪಡಿಸಿದವಳಲ್ಲವೇ! ಆಕೆಯ ಊಟದ ವೈಖರಿ ನಿನಗಿಂದು ಕಿರಿಕಿರಿಯಾದರೂ ತುಸುವೇ ಸಹಿಸಿಕೋ... ಮುಂದೊಂದು ದಿನ ಆಕೆಯ ತಿಥಿ ಮಾಡಿ ಊಟ ಹಾಕುವಾಗ ಆಕೆಯ ನೆನಪು ಬಾರದೆ ಇರುವುದಿಲ್ಲ.

ವಯಸ್ಸಾದ ಕಾರಣ ದೇಹದ ನೋವುಗಳು ಬಾಧಿಸುವ ಆಕೆಗೆ ಸರಿಯಾಗಿ ನಿದ್ದೆ ಬರುವುದಿಲ್ಲ. ಹಾಗಾಗಿ ಪದೇ ಪದೇ ಮಗ್ಗಲು ಬದಲಾಯಿಸಿ, ಕೆಲವೊಮ್ಮೆ ನಿಧಾನವಾಗಿ ಬಚ್ಚಲಿಗೆ ಹೋಗುವಷ್ಟರಲ್ಲಿಯೇ ಆಕೆ ಮೂತ್ರ ವಿಸರ್ಜಿಸಬಹುದು ಇಲ್ಲವೇ ಹಾಸಿಗೆಯನ್ನು ಕೂಡ ಒದ್ದೆ ಮಾಡಬಹುದು. ಬೇಸರಪಡದಿರು. ಅದೆಷ್ಟು ಹಗಲುಗಳು ಮತ್ತು ಅದೆಷ್ಟು ರಾತ್ರಿಗಳು ಆಕೆ ನೀನು ಒದ್ದೆಯಾಗದಿರಲೆಂದು, ಒದ್ದೆಯಾದರೆ ನಿನಗೆ ಶೀತ ನೆಗಡಿ ಆದೀತೆಂದು ಹಗಲಿರುಳು ನಿದ್ದೆಗೆಟ್ಟು ನಿನ್ನ ಸೇವೆ ಮಾಡಿಲ್ಲವೆ ಆಕೆ? ಆಕೆಯ ಕೊನೆಯ ಘಳಿಗೆಯಲ್ಲಿ ಎಲ್ಲ ನೆನಪುಗಳನ್ನು ಮರುಕಳಿಸುವಂತೆ ಸಂಭಾಷಿಸು. ಆಕೆ ನಿನ್ನನ್ನು ತಬ್ಬಿ ಹಿಡಿದಂತೆ ನೀನು ಆಕೆಯನ್ನು ತಬ್ಬಿಕೋ. ನಿನ್ನ ಪ್ರೀತಿ ಆಕೆಯ ಕೊನೆಯ ದಿನಗಳ ದಾರಿದೀಪವಾಗಲಿ. ನಿನ್ನ ಪ್ರೀತಿಯ ಅಕ್ಕರೆಯ ಮಾತುಗಳು ಆಕೆಗೆ ಸಮಾಧಾನ ನೀಡುವ ಅಮೃತ ಸಿಂಚನವಾಗಲಿ.

ಇನ್ನೇನು ಆಕೆಯ ಬಾಳಿನಲ್ಲಿ ಬಹಳ ದಿನಗಳು ಉಳಿದಿಲ್ಲ. ಈಗಾಗಲೇ ಆಕೆ ಅಸಹಾಯಕತೆಯಿಂದ ಬಳಲುತ್ತಿರುವಳು. ನಿನಗೆ ಹೊರೆಯಾಗಿದ್ದೇನೆಂದು ಭಾವಿಸುತ್ತಿರುವಳು. ವೃದ್ಧಾಪ್ಯದ ಕಾರಣ ದೇಹ ಶಿಥಿಲಗೊಂಡಿದ್ದು ಮನಸ್ಸು ಮತ್ತು ದೇಹಗಳು ಆಕೆಗೆ ಸಹಕರಿಸುತ್ತಿಲ್ಲ.... ದೇವರೇ ನನ್ನನ್ನು ಕರೆದುಕೋ ಎಂದು ಪ್ರತಿದಿನವೂ ಆಕೆ ಆ ದೇವರಲ್ಲಿ ಬೇಡುತ್ತಿರುವಳು. ಆದರೆ ಆಕೆಯ ಭೂಮಿಯ ಋಣ ಇನ್ನೂ ತೀರಿಲ್ಲ. ಆಕೆಯ ಅಸಹನೀಯ ಬದುಕನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಆ ದೇವರು ನಿನಗೆ ಕೊಡಲಿ, ಆಕೆಯ ಎಲ್ಲಾ ತೊಂದರೆಗಳನ್ನು ಅರಿತು ಆಕೆಯನ್ನು ಆಕೆ ಇರುವಂತೆಯೇ ಪ್ರೀತಿಸುವ, ಒಪ್ಪಿಕೊಳ್ಳುವ ಸಹೃದಯತೆ ನಿನ್ನದಾಗಲಿ. ಬಾಳಿನ ಸಂಜೆಯಲ್ಲಿ ಆಕೆ ಸಮಾಧಾನದ ನಿಟ್ಟುಸಿರಿನೊಂದಿಗೆ ಅಂತ್ಯ ಕಾಣುವಾಗ ಆಕೆಯನ್ನು ಚೆನ್ನಾಗಿ ನೋಡಿಕೊಂಡ ತೃಪ್ತಿ ನಿನ್ನದಾಗಲಿ ಎಂದು ಹಾರೈಸುವ ನಿನ್ನ ಚಿಕ್ಕಮ್ಮ

# ಕಹಿ ಸತ್ಯ ಸಿಹಿ ಸುಳ್ಳು...

■ ಡಾ. ರಾಜಶೇಖರ ಜಮದಂಡಿ



ಒಮ್ಮೆ ಬೇಟೆಗಾರ ಜಿಂಕೆಯನ್ನು ಬೆನ್ನಟ್ಟಿದಾಗ ಅದು ತಪ್ಪಿಸಿಕೊಂಡು ತಪಸ್ವಿಯೊಬ್ಬನ ಮೊರೆ ಹೋಗಿ ಗುಡಿಸಲಿನಲ್ಲಿ ಅಡಗಿಕೊಂಡಿತು. ಬೇಟೆಗಾರ ತಪಸ್ವಿಯನ್ನು ವಿಚಾರಿಸುತ್ತಾ: "ಜಿಂಕೆ ಓಡಿ ಬಂತು ನೋಡಿದಿರಾ?" ಎಂದು ಪ್ರಶ್ನಿಸಿದ. 'ಹೌದು' ಎಂದರೆ ಅದರ ಪ್ರಾಣ ಹೋಗುತ್ತೆ. 'ಇಲ್ಲ'ವೆಂದರೆ ಸುಳ್ಳು ಹೇಳಿದಾಗುತ್ತೆ. ತಪಸ್ವಿಗೆ ಪ್ರಾಣಸಂಕಟ. ಜಿಂಕೆಯ ಪ್ರಾಣ ಉಳಿದಿರಬೇಕು ಮತ್ತು ತಾನು ಸುಳ್ಳು ಹೇಳಿರಬಾರದು ಎಂಬ ಆಲೋಚನೆಯಿಂದ "ಈ ಕಡೆಗೆ ಜಿಂಕೆಯೊಂದು ಬಂದಿದ್ದನ್ನು ನನ್ನ ಕಣ್ಣುಗಳು ನೋಡಿವೆ ಅವುಗಳಿಗೆ ಮಾತನಾಡಲು ಬರುವುದಿಲ್ಲ. ನನ್ನ ಬಾಯಿ ಆ ಜಿಂಕೆಯನ್ನು ನೋಡಿಲ್ಲ. ಹಾಗಾಗಿ ಅದಕ್ಕೆ ಸುಳ್ಳು ಹೇಳಲು ಬರುವುದಿಲ್ಲ" ಎಂದು ಉತ್ತರಿಸಿದಾಗ ಆತ ಮರುಮಾತಾಡದೇ ಹೊರಟುಹೋದನಂತೆ.

"ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಬಂಧುಬಳಗ, ಸತ್ಯವಾಕ್ಯಕ್ಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು" ಈ ಗೋವಿನಹಾಡು 'ಸತ್ಯವಿದ್ದರೆ ಎತ್ತಲೂ ಭಯವಿಲ್ಲ'ವೆಂಬುದನ್ನು ಪ್ರತಿನಿಧಿಸಿದೆ. ಗೋವು ವ್ಯಾಘ್ರಕ್ಕೆ ಕೊಟ್ಟ ಮಾತಿನಂತೆ ನಡೆದು, ತನ್ನ ಪ್ರಾಣ ಮತ್ತು ತನ್ನ ಕರುವನ್ನು ಕಾಪಾಡಿಕೊಳ್ಳುತ್ತದೆ. ವಿಪರ್ಯಾಸವೆಂದರೆ ಸುಳ್ಳು ಬಲುಬೇಗ ಖುಷಿ ಕೊಡುವಂತೆ, ಸತ್ಯ ಆರಂಭದಲ್ಲಿ ಕಹಿಯಾಗಿರುವುದೇ ಹೆಚ್ಚು. ಜನರ ಮುಂದೆ ಪಿಸುಮಾತಿನಲ್ಲಿ ಹತ್ತುಬಾರಿ ಸುಳ್ಳನ್ನೇ ಹೇಳಿದರೆ ಅದು ಸತ್ಯವಾಗಿ ಮಾರ್ಪಾಡಾಗುತ್ತದಂತೆ. ಆದರೆ ಸತ್ಯವನ್ನು ರಾಜಾರೋಷದಿಂದ ಗಟ್ಟಿಯಾಗಿ ಒಮ್ಮೆ ಹೇಳಿದರೂ ಬೇಗ ಯಾರೂ ನಂಬಲಾರರು. ಇದಕ್ಕೆ ಅವರವರ ಮನೋಭಾವವೇ ಸಾಕ್ಷಿ. ಸುಳ್ಳಿಗೆ ಮೋಸ ಹೋಗುವಷ್ಟು ಸತ್ಯಕ್ಕೆ ಬೆಲೆ ನೀಡಲಾರರು. ಸುಳ್ಳು (ಸುಳ್ಳಿಗೆ ಸುಖವಿಲ್ಲ) ಸ್ವಲ್ಪಹೊತ್ತು ಹೊಗೆಯಾಡುತ್ತದೆ. ಸತ್ಯ (ಸತ್ಯಕ್ಕೆ ಸಾವಿಲ್ಲ) ವೆಂಬುದು ಬೂದಿಮುಚ್ಚಿದ ಕೆಂಡದಂತೆ.

ಸತ್ಯದ ಅನ್ವೇಣೆಯಲ್ಲಿ ಇಡೀ ತಮ್ಮ ಬದುಕು ಸವೆಸಿದ ದಾರ್ಶನಿಕರು, ಮಹಾನುಭಾವರು ಅನೇಕರಿದ್ದಾರೆ. ಒಂದು ಕಾಲದ ಸತ್ಯ ಮತ್ತೊಂದು ಕಾಲದಲ್ಲಿ ಅಸತ್ಯವಾಗಬಹುದು. ಸುಳ್ಳಿಗೆ ಸಾವಿರ ಮುಖಗಳಾದರೆ ಸತ್ಯಕ್ಕೆ ಒಂದೇ ಮುಖ. ಕೆಲವೊಮ್ಮೆ ಬದುಕಿನಲ್ಲಿ ಸಂದಿಗ್ಧ ಪರಿಸ್ಥಿತಿಗಳು ಎದುರಾದಾಗ ಸಂದರ್ಭಾನುಸಾರ ಸುಳ್ಳು ಹೇಳಲೇ ಬೇಕಾಗಬಹುದು. ಆದರೆ ಸಾವರಿಸಿಕೊಂಡು ಆಲೋಚಿಸಿ ಮಾತಾಡಿದಾಗ ಘಟನೆಯಿಂದ ಪಾರಾಗಬಹುದು. ತಪ್ಪಿಸಿಕೊಳ್ಳಲು ಸುಳ್ಳು ಹೇಳಿದರೂ ಕೊನೆಗೆ ತೊಂದರೆಯಲ್ಲಿ ಪರ್ಯಾವಸಾನವಾಗಬೇಕಾಗುತ್ತದೆ.



ಎಲ್ಲಿಯವರೆಗೆ ಸುಳ್ಳನ್ನು ನಂಬುತ್ತೇವೆಯೋ ಅಲ್ಲಿಯವರೆಗೆ ಅದರ ಮೇಲೆ ಸವಾರಿ ಮಾಡಿ ಸತ್ಯವನ್ನೇ ಮರೆಯಾಗಿಸುವವರಿದ್ದಾರೆ. ಆದರೂ ಜಗದಲ್ಲಿ ಸತ್ಯಕ್ಕಿಂತ ಶ್ರೇಷ್ಠ ಹಾಗೂ ಸುಳ್ಳಿಗಿಂತ ಕನಿಷ್ಠವಿರಲಾರದು. 'ಶಿವನಾದೊಡೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್' ಎಂದು ಹರಿಹರ ಗಿರಿಜಾಕಲ್ಯಾಣದಲ್ಲಿ ಹೇಳಿದಂತೆ, ಸತ್ಯ ನುಡಿಯಲು ಧೈರ್ಯಬೇಕು ಮತ್ತು ಇದಕ್ಕಾಗಿ ದೃಷ್ಟಿ ಹೀನರಾಗದೇ ಎಚ್ಚರದ ನೋಟವುಳ್ಳವರಾಗಿ ಮಿತಿಯರಿತು ಹಿತದಲ್ಲಿ ಸತ್ಯ ಅನಾವರಣಗೊಳಿಸಬೇಕು.

ಕವಿ ಮನಸು

## ತನ್ಮಯಳಾದಳು ರಾಧೆ




ತೇಲುತ ಬರುತಿರೆ ಮುರಳಿಯ ನಾದವು
ಕೇಳುತ ತನ್ಮಯ ರಾಧೆ
ತಾಳವು ತಪ್ಪಿತು ಹೃದಯದ ಬಡಿತವು
ಸೋಲುವ ಹಿತಕರ ಬಾಧೆ

ಮುರಳಿಯ ನಾದಕೆ ಸೋತಿದೆ ಮೈಮನ
ಮರೆಯದು ಇನಿಯನ ಹೃದಯ
ನರದಲಿ ಹರಿಯುವ ನೆತ್ತರು ನುಡಿದಿದೆ
ಹರಿಯನು ಸೇರುವ ಸಮಯ

ತಿಂಗಳ ಬೆಳಕಿನ ಸುಂದರ ಇರುಳಲಿ
ಸಿಂಗರಗೊಂಡಳು ನಾರಿ
ಮಂಗಳ ಮೂರುತಿ ಕೃಷ್ಣನ ಸೇರುವ
ಇಂಗದ ಬಯಕೆಯು ಮೀರಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಕ್ಷಮಿಸು ಗೆಳತಿ ಈ ಗೆಳೆಯನನ್ನು,



ಗೆಳತಿ ನಿನ್ನ ಆಕರ್ಷಣೆ
ಮೋಡಿ ಮಾಡಿತು ನಿನ್ನಾಣೆ
ನೀನೇ ನನ್ನ ಗೆಳತಿ
ನೀನೇ ನನ್ನ ಬಾಳ ಒಡತಿ।

ನನ್ನದೆ ಮಾತು ಅತೀಯಾಯ್ತು
ಮಾತು ಮಾತು ವಿರಸವಾಯ್ತು
ಸಮಯ ಸಂದರ್ಭ ಹಾಗಿತ್ತು ಕಣೆ
ಮಾತು ಕಡಿಮೆ ಮಾಡುವೆ ನನ್ನಾಣೆ।

ನಿನ್ನ ಹೆಜ್ಜೆಯಲಿ ನಾನಿರುವೆ
ನನ್ನ ಹೆಜ್ಜೆಯಲಿ ನೀನಿರು
ನಿನ್ನ ಮಾತು ಕೇಳುತ ನಾನಿರುವೆ
ನನ್ನ ಮಾತು ಕೇಳುತ ನೀನಿರು।

– ಚಂದ್ರಶೇಖರಯ್ಯ ರೋಣದಮಠ

## ಸ್ವಾಗತ

ಮುಂಜಾನೆಯ ಮುಸುಕು ಸರಿಸುತ
ಜಗವನು ಬಡಿದು ಎಬ್ಬಿಸುತ
ಬೆಳಕನು ಎಲ್ಲೆಡೆ ಸೂಸುತ
ಕೋರುವನು ರವಿ ಸ್ವಾಗತ

ಹಳೆಯ ಎಲೆಗಳು ಉದುರುತ
ಹೊಸ ಚಿಗುರು ಒಡೆಯುತ
ಕೋಗಿಲೆಯು ಗಾನವ ಹಾಡುತ
ವಸಂತ ಋತುವಿಗೆ ಸ್ವಾಗತ

ಬಿಸಿಲ ಧಗೆಯ ಮರೆಸಲು
ಹಸಿರ ಉಡುಗೆ ಉಡಿಸಲು
ಬಾನಲಿ ಮೋಡವ ಕಟ್ಟುತ
ಮಳೆಗೆ ಇಳೆಯ ಸ್ವಾಗತ

ನೋವನು ಒಳಗೆ ಸಹಿಸುತ
ನಲಿವನು ಎಲ್ಲರಿಗೂ ಹಂಚುತ
ಹೊಸ ಕನಸನು ಕಾಣುತ
ನವ ಬದುಕಿಗೆ ಸ್ವಾಗತ

– ಚೇತನ ಭಾರ್ಗವ ಬೆಂಗಳೂರು

**ಸಂಶೋಧಕ ಎಂ.ಎಂ. ಕಲಬುರ್ಗಿಯವರು 30.08.2015ರಂದು ಹಂತಕನ ಗುಂಡಿಗೆ ಬಲಿಯಾಗಿ ಇಂದಿಗೆ ಒಂಭತ್ತು ವರ್ಷಗಳು ಸಂದಿವೆ. ಈ ಸಂದರ್ಭದಲ್ಲಿ ಡಾ. ಎಂ.ಎಂ. ಕಲಬುರ್ಗಿಯವರ ಒಡನಾಟದಲ್ಲಿ ಬೆಳದ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ, ಹಿರಿಯ ಸಂಶೋಧಕ ಡಾ. ಕೆ. ರವೀಂದ್ರನಾಥ ಅವರು ಮಹಾಮಾರ್ಗಕಾರನ ನೆನಪಿನಲ್ಲಿ.... ಎಂಬ ತಮ್ಮ ಅನುಭವವನ್ನು ಹಾಗೂ ಕಲಬುರ್ಗಿಯವರ ಶೈಕ್ಷಣಿಕ ಆಯಾಮವನ್ನು ಕುರಿತಾದ ಲೇಖನ ಮೂಲಕ ಕಲಬುರ್ಗಿಯವರ ಸ್ಮರಣೆ**

# ಮಹಾಮಾರ್ಗಕಾರನ ನೆನಪಿನಲ್ಲಿ



ನಾಡಿನ ಶ್ರೇಷ್ಠ ವಿದ್ವಾಂಸರಾದ ಲಿಂ. ಡಾ. ಎಂ ಎಂ ಕಲಬುರ್ಗಿ ಅವರು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು ಕಳೆದಿವೆ. ಸಾಹಿತ್ಯ, ಸಂಶೋಧನೆ, ಸಮಾಜಸೇವೆ, ಸಾಂಸ್ಕೃತಿಕ ಕೆಲಸಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡರು. ಅನೇಕ ಮಠ–ಮಾನ್ಯಗಳಿಗೆ, ಸಂಘ– ಸಂಸ್ಥೆ, ಪ್ರಾಧಿಕಾರಗಳಿಗೆ ಸಾಹಿತ್ಯಕ ಮತ್ತು ಸಾಮಾಜಿಕವಾಗಿ ಮಾರ್ಗದರ್ಶನ ನೀಡಿದರು. ತಮ್ಮ ಭಾಷಣ ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢನಂಬಿಕೆಗಳನ್ನು ಖಂಡಿಸಿ ಶರಣರ ವರ್ಗ–ವರ್ಣ–ಲಿಂಗಭೇದ ಇಲ್ಲದ ಸಮಾನತೆ, ಸದಾಚಾರ ಸ್ವಸ್ಥ ಸಮಾಜದ ನಿರ್ಮಾಣದ ಜಾಗೃತಿಯನ್ನು ಮೂಡಿಸುವಲ್ಲಿ ನಿರತರಾದರು. ಸ್ಥಾವರಗೊಂಡ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಜಂಗಮಗೊಳಿಸಬೇಕೆಂಬ ಉದ್ದೇಶದಿಂದ ಸಮಾಜ ಶುದ್ಧಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ವೈಚಾರಿಕ ವಿಚಾರಗಳು ಪ್ರಖರವಾದ ಆಲೋಚನೆಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ ಹಾಗೂ ಸಂಕುಚಿತ ಮನಸ್ಸುಗಳಿಗೆ ಅಪಥ್ಯವೆನಿಸಿದವು. ಇದರ ಪರಿಣಾಮ ಸತ್ಯಶೋಧಕರಾದ ಡಾ ಎಂ.ಎಂ. ಕಲಬುರ್ಗಿಯವರು ದುಷ್ಟ ಶಕ್ತಿಗಳ ಗುಂಡಿಗೆ ಬಲಿಯಾಗಬೇಕಾಯಿತು. 30–8–2015 ಕನ್ನಡ ನಾಡಿನ ಇತಿಹಾಸದಲ್ಲಿ ಕರಾಳ ದಿನ."ಸೌಜನ್ಯದ" ಸಾಕಾರ ಮೂರ್ತಿಯಾಗಿದ್ದ ಡಾ. ಎಂ.ಎಂ. ಕಲಬುರ್ಗಿಯವರನ್ನು ಹಾಡುಹಗಲೇ ವಿದ್ಯಾರ್ಥಿ ಹೆಸರಿನಲ್ಲಿ ಮನೆಗೆ ಬಂದು ಹತ್ಯೆ ಮಾಡಲಾಯಿತು. ಈ ಹತ್ಯೆ ಸತ್ಯದ ಕೊಲೆ, ಅಭಿವ್ಯಕ್ತಿ ಸ್ವಾತಂತ್ರದ ಕಗ್ಗೊಲೆ, ಶರಣತತ್ವ ಚಿಂತಕ ಮತ್ತು ಲಿಂಗಾಯತ ಸಮಾಜದ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡಿತು, ಸಂಶೋಧನಾ ಕ್ಷೇತ್ರ ಬಡವಾಯಿತು. ಅವರು ಹಾಕಿಕೊಟ್ಟ ಸಂಶೋಧನಾ ಮಹಾಮಾರ್ಗ ಕನ್ನಡ ಸಂಶೋಧನೆಗೆ ರಾಜಮಾರ್ಗವಾಗಿ ಪರಿಣಮಿಸಿದೆ. ಅವರೊಂದಿಗಿನ ಸಂಬಂಧವನ್ನು ಮತ್ತು ಅವರ ಅಧ್ಯಯನದ ಶಿಸ್ತನ್ನು ಹಂಚಿಕೊಳ್ಳುವುದರ ಮೂಲಕ ಸಂಶೋಧನಾ ಮಹಾಮಾರ್ಗಕಾರನ ನೆನಪನ್ನು ಮಾಡಿಕೊಳ್ಳಲಾಗಿದೆ.

ನಾನು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ.ಕನ್ನಡ ಹಾಗೂ ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿ. ಹೀಗಾಗಿ ಪ್ರಾತಃಸ್ಮರಣೀಯರಾದ ಡಾ.ಎಂ.ಎಂ. ಕಲಬುರ್ಗಿ ಅವರನ್ನು ವರ್ಗಕೋಣೆಯ ಗುರುಗಳನ್ನಾಗಿ ಪಡೆಯದಿದ್ದರೂ ನನ್ನ ಓದು ಮತ್ತು ಬರಹಗಳಿಗೆ ಸಾಕ್ಷಿಪ್ರಜ್ಞೆಯಾಗಿದ್ದವರು. ನನ್ನ ಬೌದ್ಧಿಕ ಬೆಳವಣಿಗೆಗೆ ನೀರು–ಗೊಬ್ಬರವಾಗಿ ಬೆಳೆಸಿದ ಮಹಾಗುರುಗಳು. ಸಂಶೋಧನೆಯ ಮಹಾಮಾರ್ಗದ ಪಥಿಕ, ಪರಿಪೂರ್ಣ ಪ್ರಾಧ್ಯಾಪಕರಾದ ಡಾ.ಎಂ.ಎಂ.ಕಲಬುರ್ಗಿ ಅವರ ಒಡನಾಟಕ್ಕೆ ನಾನು ಬಂದದ್ದು 1988 ರಿಂದ.ಗುಲಬರ್ಗಾ ವಿಶ್ವವಿದ್ಯಾಲಯದ ಪರೀಕ್ಷಾ ಕೆಲಸಕ್ಕೆ ಬಂದಾಗಲೆಲ್ಲ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಶೇಷ ಉಪನ್ಯಾಸ ನೀಡಲು ಅಲ್ಲಿಯ ಮುಖ್ಯಸ್ಥರಾಗಿದ್ದ ಡಾ. ಎಂ.ಜಿ.ಬಿರಾದಾರ ಅವರು ಎಂ. ಎಂ. ಕಲಬುರ್ಗಿ ಅವರನ್ನು ಆಹ್ವಾನಿಸುತ್ತಿದ್ದರು. ಅಂಥ ಉಪನ್ಯಾಸಗಳಲ್ಲಿ ನನಗೆ ಇನ್ನೂ ನೆನಪಿರುವುದು "ದುರ್ಯೋಧನನ ಸೋಲಿಗೆ ಕಾರಣಗಳು" ಎಂಬುದನ್ನು ಕರ್ಣ ಮತ್ತು ಕರ್ಣನ ಜಾತಿ ಕುರಿತಾದ ಚರ್ಚೆಯ ಹಿನ್ನೆಲೆಯಲ್ಲಿ ಮಾತನಾಡಿದ್ದು. ಆಗಲೇ ನಾನು ಡಾ.ಎಂ.ಎಂ.ಕಲಬುರ್ಗಿ ಅವರ ಪ್ರಭಾವಕ್ಕೆ ಒಳಗಾದವನು. ಇದರ ಜೊತೆಗೆ ಡಾ.ಸಂಗಮೇಶ ಸವದತ್ತಿಮಠ ಅವರ ಸಂಪಾದಕತ್ವದಲ್ಲಿ "ಸಂಶೋಧನಾ ವ್ಯಾಸಂಗ" ದ್ವೈಮಾಸಿಕ ಪತ್ರಿಕೆ ಹೊರಡುತಿತ್ತು. ಆ ಪತ್ರಿಕೆಯಲ್ಲಿ ಅಂಕಣ ಬರಹಗಳಾಗಿ ಡಾ. ಎಂ.ಎಂ ಕಲಬುರ್ಗಿ ಅವರ ಮಾರ್ಗ ಸಂಪುಟದ ಲೇಖನಗಳು ಸೀರಿಯಲ್ ಆಗಿ ಪ್ರಕಟವಾಗುತ್ತಿದ್ದವು. ದಂಡಿನದಾರಿ, ಹರಿಹರನ ನಿಜನಾಮ ಇತ್ಯಾದಿ ಇತ್ಯಾದಿ ಲೇಖನಗಳು ನನ್ನ ಓದಿನ ಆಸಕ್ತಿಯನ್ನು ಮತ್ತು ಡಾ. ಎಂ.ಎಂ. ಕಲಬುರ್ಗಿ ಅವರ ಮೇಲಿನ ಪ್ರೀತಿಯನ್ನು ಇಮ್ಮಡಿಗೊಳಿಸಿದ್ದವು.



ಡಾ. ಕೆ.ರವೀಂದ್ರನಾಥ
ವಿಶ್ರಾಂತ ಪ್ರಾಧ್ಯಾಪಕರು ಕನ್ನಡ ವಿವಿ ಹಂಪಿ

Hampi Times E-paper
SCAN AND READ

1993 ರಲ್ಲಿ ಡಾ. ಎಂ.ಎಂ.ಕಲಬುರ್ಗಿ ಅವರನ್ನು ಈಗಿನ ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭೇಟಿಯಾಗಿದ್ದೆ, 'ಕನ್ನಡ ಸಾಹಿತ್ಯಕ್ಕೆ ಮಠ–ಮಾನ್ಯಗಳ ಸೇವೆ' ಎಂಬ ನನ್ನ ಪಿಎಚ್.ಡಿ ವಿಷಯಕ್ಕೆ ಸಂಬಂಧಿಸಿದಂತೆ ಅವರೊಂದಿಗೆ ಚರ್ಚಿಸಲು ಹೋಗಿದ್ದೆ. ಪಕ್ಕದಲ್ಲೇ ಇದ್ದ ಒಂದು ಪುಸ್ತಕ ತೆಗೆದು ಅವರೇ ಬರೆದ ಮುನ್ನುಡಿಯ ಮಾತುಗಳನ್ನು ಓದುತ್ತ "ಊರೊಳಗಿನ ಮಠ ಬೇರೆ, ಅಡವಿಯೊಳಗಿನ ಆಶ್ರಮ ಬೇರೆ, ಆಶ್ರಮದ ಕೆಲಸ ಆತ್ಮಸಂರಕ್ಷಣೆ: ಮಠದ ಕೆಲಸ ಸಮಾಜ ಸಂರಕ್ಷಣೆ" ಎಂದು ಪಟಪಟನೆ ಹೇಳಿಯೇ ಬಿಟ್ಟರು. ಹಾಗೆಯೇ ಮಠಗಳಲ್ಲಿಯ ಹಸ್ತಪ್ರತಿ ಸಂರಕ್ಷಣೆ, ಜೈನ, ವೈದಿಕ ಮಠಗಳಿಗಿಂತ ಲಿಂಗಾಯತ ಮಠಗಳ ಕನ್ನಡ ಪರವಾದ ಕೆಲಸ ಇತ್ಯಾದಿ ಸಂಗತಿಗಳನ್ನು ಚರ್ಚಿಸಿದ್ದರಲ್ಲದೆ; ಸಮಯದ ಗಡುವು ನೀಡಿ ಕಡ್ಡಾಯವಾಗಿ ಕೆಲವು ಅಧ್ಯಾಯಗಳನ್ನು ಬರೆದುಕೊಂಡು ಬರಲು ಸೂಚಿಸಿದರು. ಈ ಘಟನೆಯಿಂದ ನನ್ನ ಅರಿವಿಗೆ ಬಂದದ್ದು ಡಾ.ಎಂ.ಎಂ. ಕಲಬುರ್ಗಿ ಅವರಿಗೆ ಕೆಲಸ ಮಾಡುವವರು ಯಾರೇ ಇರಲಿ, ಯಾವ ಪ್ರದೇಶದವರೇ ಇರಲಿ, ಯಾವ ವಿಶ್ವವಿದ್ಯಾಲಯ–ಕಾಲೇಜುಗಳ ವಿದ್ಯಾರ್ಥಿಯಾಗಿರಲಿ ಅವರಿಂದ ಆಗಬೇಕಾದುದು ಕೆಲಸ ಮಾತ್ರ. ಕೆಲಸ ಮಾಡುವುದನ್ನು ಬಿಟ್ಟರೇ ನನಗೆ ಬೇರೆ ಕೆಲಸವೇ ಇಲ್ಲ ಎಂದು ಅವರೇ ಹೇಳಿಕೊಂಡಂತೆ ಕೆಲಸ ಮಾಡುವವರನ್ನು ದುಡಿಸಿಕೊಳ್ಳುವಲ್ಲಿ ಅವರು ಸಿದ್ಧಹಸ್ತರಾಗಿದ್ದರು. ಮುಂದೆ 1994 ಗುಲಬರ್ಗಾ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ರಾಯಚೂರಿನಲ್ಲಿ ನಾನು ಅತಿಥಿ ಅಧ್ಯಾಪಕನಾಗಿದ್ದೆ. "ಕನ್ನಡ ಅನುಭಾವ ಸಾಹಿತ್ಯ" ಎಂಬ ವಿಚಾರ ಸಂಕಿರಣ ಹಮ್ಮಿಕೊಂಡಿದ್ದೆವು. ಕಥೆಗಾರರಾದ ಶ್ರೀ ಶಾಂತರಸರು ಉದ್ಘಾಟಕರಾಗಿ, ಡಾ.ಎಂ.ಎಂ.ಕಲಬುರ್ಗಿ ಅವರು ಆಶಯ ಭಾಷಣಕಾರರಾಗಿ, ಡಾ.ವೀರಣ್ಣ ರಾಜೂರ ಅವರು ಪ್ರಬಂಧಕರಾಗಿ ಆಗಮಿಸಿದ್ದರು. ಇವರ ಆತಿಥ್ಯದ ಹೊಣೆಗಾರಿಕೆ ನನ್ನದಾಗಿತ್ತು. ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಅತಿಥಿ ಗೃಹದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಅತಿಥಿ ಗೃಹಕ್ಕೆ ಬಂದವರೇ ಸೂಟ್‌ಕೇಸ್ ತೆಗೆದು ಒಂದು ಅಂಗಿಯನ್ನು ನನಗೆ ಕೊಟ್ಟು ಇಸ್ತ್ರಿಯವರಿದ್ದರೆ ಮಾಡಿಸಿ ಎಂದರು. ನಾನು ಪಕ್ಕದ ಅಸ್ಕಿಹಾಳ ಗ್ರಾಮಕ್ಕೆ ಹೋಗಿ ಸರ್ ಅವರ ಅಂಗಿಯನ್ನು ಇಸ್ತ್ರಿ ಮಾಡಿಸಿಕೊಂಡು ಬಂದು ಕೊಟ್ಟೆನು. ಆಶಯ ಭಾಷಣದ ಪ್ರತಿಯನ್ನು ಸಿದ್ಧಪಡಿಸಿಕೊಂಡೇ ಬಂದಿದ್ದರು. ಅಂದರೆ ಡಾ.ಎಂ.ಎಂ. ಕಲಬುರ್ಗಿ ಅವರು ಶೈಕ್ಷಣಿಕ ಸಂಬಂಧಿ ಸಿದ್ಧತೆಗಳನ್ನು ಪೂರ್ವ ನಿಯೋಜಿತವಾಗಿ ಮಾಡಿಕೊಂಡು ಬರುವುದರ ಕಡೆ ಗಮನವಿರುತಿತ್ತೇ ಹೊರತು ವೇಷಭೂಷಣ–ಬಟ್ಟೆಬರಿಗಳ ಕಡೆಗೆ ಅಷ್ಟಾಗಿ ಗಮನಹರಿಸುತ್ತಿದ್ದಿಲ್ಲವೆಂದು ತೋರುತ್ತದೆ. ಆ ದಿನ ಕನ್ನಡ ಅನುಭಾವ ಸಾಹಿತ್ಯ ಕುರಿತು ವಚನಕಾರರನ್ನು ಕೇಂದ್ರೀಕರಿಸಿಕೊಂಡು ಇತರೆ ಅನುಭಾವ ಪಂಥಗಳ ಬಗ್ಗೆ ಮಾತನಾಡಿದರು. ಮಾರನೆಯ ದಿನ ರಾಯಚೂರುವಾಣಿ ಪತ್ರಿಕೆಯಲ್ಲಿ ಗಂಗಾಧರ ಕುಷ್ಟಗಿ ಅವರು ಕಲಬುರ್ಗಿ ಅವರ ಮಾತುಗಳನ್ನು ಜಾತಿವಾದಿ ನೆಲೆಯಲ್ಲಿ ಅರ್ಥೈಸಿ ವರದಿ ಮಾಡಿದ್ದರು. ಇದನ್ನು ಗಮನಿಸಿದ ನಾನು "ಕಲಬುರ್ಗಿ ಸರ್ ಅವರ ನಿನ್ನೆಯ ಆಶಯ ಭಾಷಣದ ಪೂರ್ವಾರ್ಧದ ಮಾತುಗಳನ್ನು ಕೇಳಿದ್ದೀರಿ ಹೊರತು, ಅವರ ಉತ್ತರಾರ್ಧದ ಮಾತುಗಳಲ್ಲಿ ಅನುಭಾವ ಸಾಹಿತ್ಯ ಕುರಿತು ಮಂಡಿಸಿದ ನಿಲುವುಗಳನ್ನು ನೀವು ಸರಿಯಾಗಿ ಗ್ರಹಿಸದೇ ಈ ರೀತಿ ವರದಿ ಮಾಡಿರುವುದು ಸರಿಯಲ್ಲವೆಂದು", ಅದೇ ರಾಯಚೂರು ವಾಣಿಯಲ್ಲಿ ಪ್ರತಿಕ್ರಿಯೆ ನೀಡಿದ್ದೆನು. ಮುಂದೆ ಗಂಗಾಧರ ಕುಷ್ಟಗಿ ಅವರು ಲಂಕೇಶ ಪತ್ರಿಕೆಯಲ್ಲಿ "ಜಾತಿವಾದಿ ಸಂಶೋಧಕ" ಎಂಬ ಶೀರ್ಷಿಕೆಯಡಿ ಇದೇ ವಿಷಯ ಕುರಿತು ವರದಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿ ಆಗ ಅಲ್ಲಿ ಪ್ರಾಧ್ಯಾಪಕರಾಗಿದ್ದ ಡಾ.ಎಂ.ಎಸ್.ಪಾಟೀಲ, ಡಾ.ವೀರಣ್ಣ ದಂಡೆ, ಡಾ.ವಿ.ಜಿ.ಪೂಜಾರ ಮತ್ತು ನಾನು ಸೇರಿ ಚರ್ಚಿಸಿ ಡಾ.ಎಂ.ಎಂ.ಕಲಬುರ್ಗಿ ಅವರ ಆ ದಿನದ ಅನುಭಾವ ಸಾಹಿತ್ಯ ಕುರಿತು ಒಟ್ಟು ನಿಲುವುಗಳೇನಿದ್ದವೆಂಬುದನ್ನು ಲೇಖನ ರೂಪದಲ್ಲಿ ಸಿದ್ಧಪಡಿಸಿ ಲಂಕೇಶ ಪತ್ರಿಕೆಗೆ ಕಳುಹಿಸಿದೆವು. ಆದರೆ ನಮ್ಮ ಅಭಿಪ್ರಾಯ ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾಗಲೇ ಇಲ್ಲ. ಸ್ಥಳೀಯ ಪ್ರತಿಕೆಯಲ್ಲಿ ಪ್ರಕಟವಾದ ಸುದ್ದಿ ಅದಕ್ಕೆ ನನ್ನ ಪ್ರತಿಕ್ರಿಯೆಗಳು ಡಾ.ಎಂ.ಎಂ.ಕಲಬುರ್ಗಿ ಅವರಿಗೆ ತಲುಪಿರಬೇಕೆಂದು ತೋರುತ್ತದೆ. ಕೆಲವೇ ದಿನಗಳಲ್ಲಿ ಒಂದು ಅಂಚೆಕಾರ್ಡಿನಲ್ಲಿ "ನನ್ನ ಭಾಷಣವನ್ನು ನೀವು ಸರಿಯಾಗಿ ಗ್ರಹಿಸಿದ್ದೀರಿ ನೀವು ಪತ್ರಿಕಾ ವರದಿಗೆ ಪ್ರತಿಕ್ರಿಯೆ ನೀಡಿರುವುದನ್ನು ಗಮನಿಸಿದ್ದೇನೆ ಸತ್ಯವನ್ನು ಗಟ್ಟಿಯಾಗಿ ಹೇಳುವುದನ್ನು ನಾವೆಲ್ಲ ಕಲಿಯಬೇಕಾಗಿದೆ. ಇದಕ್ಕೆ ಬಹುಮೂಲದ ಓದು ಅಗತ್ಯ ಅಂಥ ಓದು ನಿಮ್ಮದಾಗಲಿ" ಎಂದು ಬರೆದಿದ್ದರು. ಈ ಘಟನೆಯನ್ನು ಇಲ್ಲಿ ಪ್ರಸ್ತುತಪಡಿಸುವ ಉದ್ದೇಶವೆಂದರೆ ಡಾ.ಎಂ.ಎಂ.ಕಲಬುರ್ಗಿ ಅವರು ಏನೇ ಬರೆಯಲಿ, ಮಾತನಾಡಲಿ ಮೊದಲಿನಿಂದಲೂ ತಪ್ಪಾಗಿ ಅರ್ಥೈಸಿಕೊಳ್ಳುವ, ವಿರೋಧಿಸುವ ಜನರ ನಡುವೇ ನ್ಯಾಯ ನಿಷ್ಠುರಿ ದಾಕ್ಷಿಣ್ಯಪರನಲ್ಲ; ಲೋಕವಿರೋಧಿ ಶರಣ ಯಾರಿಗೂ ಅಂಜುವನಲ್ಲವೆಂಬ ವಚನವಾಕ್ಯಕ್ಕೆ ಭಾಷ್ಯವಾಗಿ ಬದುಕಿದ್ದವರು. ಮುಂದೆ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಪ್ರಾಧ್ಯಾಪಕನಾಗಿ ನೇಮಕಗೊಂಡಾಗ ಅವರಿಗೊಂದು ಪತ್ರ ಬರೆದಿದ್ದೆ. ಅದಕ್ಕೆ ಪ್ರತಿಕ್ರಿಯಿಸಿ ಬರೆದ ಅವರ ಪತ್ರದ ಒಕ್ಕಣಿಕೆ ಹೀಗಿದೆ. "ಡಾ. ರವೀಂದ್ರನಾಥ ವಂದನೆಗಳು, ಅಧ್ಯಾಪಕರಾದ ಸುದ್ದಿಯನ್ನು ಹೊತ್ತು ತಂದ ಪತ್ರ ತಲುಪಿದೆ. ಅಭಿನಂದನೆಗಳು. ನೀವು ಅನುಭವಿಸಿದ ಕಷ್ಟ ನಾನು ಅರ್ಥ ಮಾಡಿಕೊಂಡಿದ್ದೇನೆ. ದೇವರು ಅದಕ್ಕೆ ಪೂರ್ಣವಿರಾಮ ಹಾಕಿರುವಾಗ ನೀವು ಮೈಮರೆಯಬಾರದು. 'ಕೆಲಸವೇ ದೇವರು' ಎಂಬ ಭಾವದಿಂದ ದುಡಿಯಿರಿ ವಿಭಾಗವನ್ನು ತ್ರಿಕರ್ಣ ಪೂರ್ಕವಾಗಿ ಬೆಳೆಸಿರಿ, ನಿಮಗೆ ಇನ್ನೂ ಹೆಚ್ಚಿನ ಯಶಸ್ಸುಗಳು ಒದಗಿಬರಲಿ ವಂದನೆಗಳು." ಎಂದು ಬರೆದಿರುವುದು ನನ್ನ ವೃತ್ತಿ ಬದುಕಿನ ನಿರಂತರ ಅಧ್ಯಯನಕ್ಕೆ ಪ್ರೇರಣೆಯಾಗಿದೆ.

# ರಾಜ್ಯಕ್ಕೆ ಕಳೆದ ಐದು ವರ್ಷಗಳಲ್ಲಿ 80,000 ಕೋಟಿ ಅನುದಾನ ಕೊರತೆ

**ಕೊರತೆ ಸರಿದೂಗಿಸಲು 16ನೇ ಹಣಕಾಸು ಆಯೋಗದಿಂದ ಸಕಾರಾತ್ಮಕ ಸ್ಪಂದನೆ– ಸಿಎಂ ಸಿದ್ದರಾಮಯ್ಯ**



■ ಹಂಪಿ ಟೈಮ್ಸ್ ಬೆಂಗಳೂರು

ರಾಜ್ಯಕ್ಕೆ ಕಳೆದ ಐದು ವರ್ಷಗಳಿಂದ ವಿಶೇಷ ಅನುದಾನ ಹಾಗೂ ತೆರಿಗೆ ಹಂಚಿಕೆಯಲ್ಲಿ 80,000 ಕೋಟಿ ಅನುದಾನ ಕಡಿಮೆಯಾಗಿದೆ. ಇದನ್ನು ಸರಿಪಡಿಸಬೇಕೆಂದು 16ನೇ ಹಣಕಾಸು ಆಯೋಗವನ್ನು ಕೋರಲಾಗಿದ್ದು, ಆಯೋಗವು ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗುರುವಾರ ತಾಜ್ ವೆಸ್ಟೆಂಡ್ ಹೋಟೆಲ್ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದರು. ಡಿವಿಸಿಬಲ್ ಪೂಲ್ ಗೆ ಸೆಸ್ ಮತ್ತು ಸರ್ಜಾಜ್ ನ್ನು ಸೇರಿಸಬೇಕೆಂದು ಹಾಗೂ ಭಾರತ ಸರ್ಕಾರಕ್ಕೆ ಬರುವ ತೆರಿಗೆಯೇತರ ಆದಾಯವನ್ನೂ ಸಹ ಡಿವಿಸಿಬಲ್ ಪೂಲ್ ಗೆ ಸೇರಿಸಬೇಕೆಂದು ಕೋರಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ರಾಜ್ಯ ಸರ್ಕಾರ ಪ್ರತಿ ವರ್ಷ 5000 ಕೋಟಿ ಯಂತೆ ಐದು ವರ್ಷಕ್ಕೆ 25,000 ಕೋಟಿ ರೂ. ಖರ್ಚು ಮಾಡಲಾಗುತ್ತಿದ್ದು, ಕೇಂದ್ರ ಸರ್ಕಾರವೂ ಇದಕ್ಕೆ ಅನುರೂಪದ ಅನುದಾನ ನೀಡಬೇಕೆಂದು ಕೋರಲಾಗಿದೆ. ಬೆಂಗಳೂರು ಅಭಿವೃದ್ಧಿಗೆ ಸುಮಾರು 55,000 ಕೋಟಿ ರೂ. ವೆಚ್ಚವಾಗಲಿದ್ದು, ಈ ಮೊತ್ತದ ಅರ್ಧದಷ್ಟಾದರೂ ಅನುದಾನ ನೀಡಬೇಕೆಂದು ಕೋರಲಾಗಿದೆ ಎಂದರು.

ಪಶ್ಚಿಮ ಘಟ್ಟ ವಿಪತ್ತು ನಿರ್ವಹಣೆಗೆ ಹೆಚ್ಚಿನ ಅನುದಾನ ನೀಡಲು ಕೋರಲಾಯಿತು. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯಗಳಿಗೆ ದಂಡವಿಧಿಸಬಾರದು. ದೇಶದ ಜಿಡಿಪಿಗೆ ನಮ್ಮ ರಾಜ್ಯದಿಂದ ಶೇ.9 ರಷ್ಟು ಕೊಡುಗೆ ನೀಡುತ್ತಿದ್ದು, ಅದರಲ್ಲಿ ನಮಗೆ ಕೇವಲ ಶೇ. 1.5 ರಷ್ಟು ಮಾತ್ರ ರಾಜ್ಯದ ಪಾಲಿಗೆ ಬರುತ್ತಿದೆ. ಇದನ್ನು ಸರಿಪಡಿಸಲು ಕೋರಲಾಗಿದೆ. 14 ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ 4.713 ಪ್ರಮಾಣದ ತೆರಿಗೆ ಹಂಚಿಕೆಯಾಗುತ್ತಿತ್ತು. ಆದರೆ 15ನೇ ಹಣಕಾಸು ಆಯೋಗದಲ್ಲಿ ಈ ಪ್ರಮಾಣ 3.647 ಕ್ಕೆ ಇಳಿದಿದ್ದು, ಈ ಪ್ರಮಾಣವನ್ನೂ ಸರಿಪಡಿಸಬೇಕೆಂದು ಕೋರಲಾಗಿದೆ. ತೆರಿಗೆ ಪ್ರಮಾಣದಲ್ಲಿ 1.66 % ಕಡಿಮೆಯಾಗಿರುವ ಬಗ್ಗೆ ಆಯೋಗಕ್ಕೆ ವಿವರಣೆ ನೀಡಲಾಗಿದೆ ಎಂದರು.

ಗುಜರಾತಿನ ಮುಖ್ಯ ಮಂತ್ರಿಯಾಗಿದ್ದಾಗ ನರೇಂದ್ರ ಮೋದಿಯವರು ತೆರಿಗೆ ಹಂಚಿಕೆಯಲ್ಲಿ ಶೇ. 50 ರಷ್ಟು ಪಾಲಿಗೆ ಬೇಡಿಕೆಯಿಟ್ಟಿದ್ದರು. ಅನೇಕ ರಾಜ್ಯಗಳು ಈ ರೀತಿ ಬೇಡಿಕೆ ಸಲ್ಲಿಸಿರುವುದರಿಂದ, ಕರ್ನಾಟಕದ ಬೇಡಿಕೆಯನ್ನು ಈಡೇರಿಸಬಹುದೆಂಬ ವಿಶ್ವಾಸವಿದೆ ಎಂದರು.

# ನ್ಯಾಯಲಯದ 1ನೇ ಸರ್ಕಾರಿ ವಕೀಲರ ಹುದ್ದೆಗೆ ನೇಮಕಾತಿ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ 1ನೇ ಅಪರ ಸರ್ಕಾರಿ ವಕೀಲರ ಹುದ್ದೆಗೆ ಕರ್ನಾಟಕ ಕಾನೂನು ಅಧಿಕಾರಿಗಳು (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(3) ರಡಿ ಹುದ್ದೆಯ ಪ್ರಭಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಧಿಸೂಚನೆ ಸಂಖ್ಯೆ: ಲಾ–ಎಲ್ ಎಡಿ/01/2024, >>4 ದಿನಾಂಕ: 01.01.2024 ರಂತೆ ನೇಮಕಾತಿ ಮಾಡಲಾಗಿದ್ದು, ಪ್ರಸ್ತುತ ಸದರಿ ಹುದ್ದೆಗೆ ನೇಮಕಾತಿ ಮಾಡಲು ಕಾನೂನು ಇಲಾಖೆಯ ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1977ರ ನಿಯಮ 5 ಮತ್ತು 26(2) ಹಾಗೂ 12 (ಎ) (ಬಿ) ಮತ್ತು (ಸಿ) ರನ್ವಯ ನೇಮಕಾತಿ ಮಾಡಲು ಏಳು (07) ವರ್ಷಗಳ ಕಾಲ ವಕೀಲ ವೃತ್ತಿ ಪೂರೈಸಿದ ಅರ್ಹ ವಕೀಲರು ತಮ್ಮ ಪೂರ್ಣ ವೈಯಕ್ತಿಕ ಹಾಗೂ ಸೇವಾ ವಿವರಗಳೊಂದಿಗೆ ಲಿಖಿತ ಅರ್ಜಿಯನ್ನು (ನಿಗದಿತ ನಮೂನೆಯಲ್ಲಿ) ದ್ವಿಪ್ರತಿಯಲ್ಲಿ ಜಿಲ್ಲಾಧಿಕಾರಿಗಳು, ವಿಜಯನಗರ ಇವರ ಕಾರ್ಯಾಲಯ ಕಚೇರಿಯ ಸಮಯದಲ್ಲಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಸೆಪ್ಟೆಂಬರ್ 11ರ ಸಂಜೆ 5.30ರೊಳಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**30–08–2024 – ಶುಕ್ರವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪುನರ್ವಸು |
| ಯೋಗ | : ವ್ಯತಾಪತಾ |
| ಕರಣ | : ಕೌಳವ |
| ಸೂರ್ಯೋದಯ | : 06:09:40 |
| ಸೂರ್ಯಾಸ್ತ | : 18:44:50 |
| ರಾಹು ಕಾಲ | : 10:53–12:27 |
| ಯಮಘಂಡ ಕಾಲ | : 15:36–17:10 |
| ಗುಳಿಕ ಕಾಲ | : 07:44–09:18 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 29–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.01 ಅಡಿ |
| ಒಳ ಹರಿವು | 29014 ಕ್ಯುಸೆಕ್ |
| ಹೊರ ಹರಿವು | 9843 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 90.383 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1625.61 ಅಡಿ |
| ಒಳ ಹರಿವು | 106 ಕ್ಯುಸೆಕ್ |
| ಹೊರ ಹರಿವು | 6611 ಕ್ಯುಸೆಕ್ |
| ಸಾಮರ್ಥ್ಯ | 78.504 ಟಿಎಂಸಿ |

# ಯುವಕರು ಕ್ರೀಡಾಸಕ್ತಿ ಬೆಳೆಸಿಕೊಳ್ಳಿ

## ವಿವಿ ಕುಲಪತಿ ಪ್ರೊ.ಎಂ.ಮುನಿರಾಜು ಕರೆ । ರಾಷ್ಟ್ರೀಯ ಕ್ರೀಡಾ ದಿನಾಚರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ದೇಶದ ಯುವಕರನ್ನು ಕ್ರೀಡೆಯಲ್ಲಿ ಭಾಗವಹಿಸುವಂತೆ ಉತ್ತೇಜಿಸಲು, ಕ್ರೀಡಾಪಟುಗಳನ್ನು ಮುಖ್ಯವಾಹಿನಿಗೆ ಕರೆತರಲು ರಾಷ್ಟ್ರೀಯ ಕ್ರೀಡಾದಿನವನ್ನು ದೇಶದಾದ್ಯಂತ ಆಚರಣೆ ಮಾಡಲಾಗುತ್ತಿದ್ದು, ಯುವ ಸಮೂಹವು ಕ್ರೀಡಾಸಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಕುಲಪತಿ ಪ್ರೊ.ಎಂ.ಮುನಿರಾಜು ಕರೆ ನೀಡಿದರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಮತ್ತು ಕ್ರೀಡಾ ವಿಜ್ಞಾನ ವಿಭಾಗ ವತಿಯಿಂದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಗುರುವಾರ ಆಯೋಜಿಸಿದ್ದ ಖೊ–ಖೊ ಪಂದ್ಯಾವಳಿಯನ್ನು ಮೇಜರ್ ಧ್ಯಾನ್‌ಚಂದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಗಳು ನಮ್ಮನ್ನು ನಾವು ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿರುವಂತೆ ಮಾಡುತ್ತವೆ. ನಮ್ಮಲ್ಲಿರುವ ಹಿಂಜರಿಕೆಯನ್ನು ತೊರೆದು, ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸ್ಪರ್ಧಾ ಮನೋಭಾವ ತೋರಿಸಬೇಕು ಎಂದು ಹೇಳಿದರು.

ವಿವಿಯ ರಾಷ್ಟ್ರೀಯ ಸೇವಾಯೋಜನೆಯ ಸಂಯೋಜನಾಧಿಕಾರಿ ಡಾ.ಕುಮಾರ್ ಅವರು ಮಾತನಾಡಿ, ಸಮಾಜ ವಿಜ್ಞಾನ ನಿಕಾಯದ ವಿಭಾಗಗಳಿಗೆ ಸ್ವಂತ ಕಟ್ಟಡದ ಕೊರತೆಯಿದ್ದು, ಒದಗಿಸಿಕೊಟ್ಟಲ್ಲಿ ನಿಕಾಯದ ವಿದ್ಯಾರ್ಥಿಗಳಿಗೆ ಕ್ರೀಡೆ ಮತ್ತು ಇನ್ನಿತರ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕುಲಪತಿ ಚಿಂತನೆ ನಡೆಸಬೇಕು ಎಂದರು.

ಮೇಜರ್ ಧ್ಯಾನ್‌ಚಂದ್ ಸ್ಮರಣಾರ್ಥ ಆಯೋಜಿಸಿದ್ದ ಖೊ–ಖೊ ಪಂದ್ಯಾವಳಿಯಲ್ಲಿ ವಿಜೇತರಾದ ವಿಭಾಗದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಕುಲಪತಿಗಳು ಟ್ರೋಫಿ ವಿತರಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ಶಶಿಧರ ಕೆಲ್ಲೂರ ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.

ದೈಹಿಕ ಶಿಕ್ಷಣ ಮತ್ತು ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸಂಪತ್ ಕುಮಾರ, ಅತಿಥಿ ಉಪನ್ಯಾಸಕರಾದ ಮಹೇಶ, ರಾಜೇಶ, ವಿದ್ಯಾರ್ಥಿ ಶಿವಪುತ್ರ, ನಾಗರಾಜ ಸೇರಿದಂತೆ ಸಂಶೋಧನಾ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




# ಇಂದು ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಆಗಸ್ಟ್ 30ರಂದು ಚುನಾವಣೆ ಪ್ರಕ್ರಿಯೆ ನಡೆಯಲಿದೆ.

ಅಧ್ಯಕ್ಷ ಸ್ಥಾನವು ಸಾಮಾನ್ಯ ವರ್ಗ ಹಾಗೂ ಉಪಾಧ್ಯಕ್ಷ ಸ್ಥಾನವು ಪರಿಶಿಷ್ಟ ಪಂಗಡದವರಿಗೆ ಮೀಸಲಿರುತ್ತದೆ. ಆಗಸ್ಟ್ 30ರ ಬೆಳಿಗ್ಗೆ 10 ರಿಂದ ಮದ್ಯಾಹ್ನ 12 ಗಂಟೆಯವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದೆ. ಅಂದು ಮಧ್ಯಾಹ್ನ 12.15ಕ್ಕೆ ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಮಧ್ಯಾಹ್ನ 12.30ರವರೆಗೆ ಅವಕಾಶವಿರುತ್ತದೆ. ಅವಶ್ಯವಿದ್ದಲ್ಲಿ ಅದೇ ದಿನ ಮಧ್ಯಾಹ್ನ 1 ಗಂಟೆಯ ನಂತರ ಚುನಾವಣೆಯನ್ನು ನಡೆಸಲಾಗುವುದು ಎಂದು ಹೊಸಪೇಟೆ ತಹಶೀಲ್ದಾರರು ಹಾಗೂ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಚುನಾವಣೆ ಪಕ್ರಿಯೆ ಕೈಗೊಂಡ ಸಭೆಯಲ್ಲಿ ಹಾಜರಿರುವ ಸದಸ್ಯರು ಕೈ ಎತ್ತುವ ಮೂಲಕ ಕ್ರಮವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯ ಪರ ಹಾಗೂ ವಿರುದ್ಧ ಮತ ಚಲಾಯಿಸಿದ ಬಗ್ಗೆ ನಡವಳಿಕೆ ಪುಸ್ತಕದಲ್ಲಿ ನಮೂದಿಸಿ, ಹೆಚ್ಚು ಮತಗಳನ್ನು ಪಡೆದು ಜಯಗಳಿಸಿದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹೆಸರಗಳನ್ನು ಘೋಷಿಸಲಾಗುವುದು ಎಂದು ತಿಳಿಸಲಾಗಿದೆ.

# ಕಾಮನೂರು ಆಯುಷ್ಮಾನ್ ಆರೋಗ್ಯ ಮಂದಿರಕ್ಕೆ ರಾಷ್ಟ್ರೀಯ ಮಾನ್ಯತೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಕಾಮನೂರು ಆಯುಷ್ಮಾನ್ ಆರೋಗ್ಯ ಮಂದಿರವು ರಾಷ್ಟ್ರೀಯ ಮಾನ್ಯತೆಯನ್ನು ಪಡೆದಿದೆ ಎಂದು ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ ಪಿ.ಬಿ.ಹಿರೇಗೌಡರ ಅವರು ತಿಳಿಸಿದ್ದಾರೆ.

NATIONAL ACCREDATION BOARD FOR HOSPITALS &HEALTH CARE PROVIDERS(NABH) ರವರು ಕರ್ನಾಟಕ ರಾಜ್ಯದ ಆಯುಷ್ ಇಲಾಖೆಯ 50 ಆಯುಷ್ಮಾನ ಆರೋಗ್ಯ ಮಂದಿರಗಳಿಗೆ ರಾಷ್ಟ್ರೀಯ ಮಾನ್ಯತೆಯನ್ನು ನೀಡಿದ್ದು, ಈ 50 ಆಯುಷ್ಮಾನ ಆರೋಗ್ಯ ಮಂದಿರದಲ್ಲಿ ಕೊಪ್ಪಳ ಜಿಲ್ಲೆಯ ಕಾಮನೂರಿನ ಆಯುಷ್ಮಾನ ಆರೋಗ್ಯ ಮಂದಿರವು ಒಂದಾಗಿದ್ದು, ತುಂಬಾ ಸಂತೋಷ ಹಾಗೂ ಹೆಮ್ಮೆ ಅನಿಸುತ್ತಿದೆ. ರಾಷ್ಟ್ರೀಯ ಮಟ್ಟದಲ್ಲಿ ಕುಗ್ರಾಮವಾದ ಕಾಮನೂರ ಆಯುಷ್ಮಾನ ಆರೋಗ್ಯ ಮಂದಿರದ ಮುಖಾಂತರ ಗುರುತಿಸಿಕೊಳ್ಳತಿರುವುದು ಕೊಪ್ಪಳ ಆಯುಷ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಆಯುಷ ಇಲಾಖೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ.

# ಐದು ವಿಧಾನಸಭಾ ಕ್ಷೇತ್ರ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ–2025 ಆರಂಭ

ಮೊದಲ ಪುಟದಿಂದ

ಅಧಿಕಾರಿಗಳು ಎಲ್ಲಾ ಮತದಾರರ ಮನೆಗೆ ಭೇಟಿ ನೀಡಿ ಪರಿಶೀಲನೆ ಕೈಗೊಳ್ಳುತ್ತಾರೆ. ಈ ಸಮಯದಲ್ಲಿ ಸಾರ್ವಜನಿಕರು ಯಾವುದೇ ರೀತಿಯ ತಿದ್ದುಪಡಿಗಳು, ಹೆಸರು ನೋಂದಣಿ, ಮೃತ ಮತ್ತು ಸ್ಥಳಾಂತರಗೊಂಡ ಮತದಾರರ ಹೆಸರುಗಳ ತೆಗೆದು ಹಾಕುವಿಕೆ ಮತ್ತು ಮುಂಬರುವ ಅರ್ಹತಾ ದಿನಾಂಕಗಳಂತೆ 18 ವರ್ಷ ತುಂಬುವ ಯುವ ಮತದಾರರು ಹೆಸರು ಸೇರ್ಪಡೆ ಕುರಿತು ಅರ್ಜಿ ಸಲ್ಲಿಸಬಹುದಾಗಿದೆ.

ಸಾರ್ವಜನಿಕರು ಈ ವಿಶೇಷ ಅಭಿಯಾನದ ಸೌಲಭ್ಯ ಬಳಸಿಕೊಳ್ಳುವಂತೆ ಹಾಗೂ ಅವಶ್ಯವಿರುವ ತಿದ್ದುಪಡಿ, ಸೇರ್ಪಡೆ ಹಾಗೂ ತೆಗೆದು ಹಾಕುವಿಕೆಗಳಿಗೆ ಅರ್ಜಿಗಳ ನಮೂನೆ 6, 7, 8ನ್ನು ಸಲ್ಲಿಸಲು ಹಾಗೂ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಆಧಾರ್ ಸಂಖ್ಯೆ ಒದಗಿಸಬಹುದಾಗಿದೆ.

ಆಗಸ್ಟ್ 20ರಿಂದ ಅಕ್ಟೋಬರ್ 18ರವರೆಗೆ ಮತಗಟ್ಟೆಮಟ್ಟದ ಅಧಿಕಾರಿಗಳಿಂದ ಮನೆಮನೆ ಭೇಟಿ ಮತ್ತು ಪರಿಶೀಲನೆ ನಡೆಸಲಿದ್ದು, ಅಕ್ಟೋಬರ್ 19ರಿಂದ ಅಕ್ಟೋಬರ್ 28ರವರೆಗೆ ನಮೂನೆ 1 ರಿಂದ 8ರ 5 ವಿಧಾನಸಭಾ ಕ್ಷೇತ್ರಗಳಿಂದ ಅಂಕಿ ಅಂಶ ಮಾಹಿತಿ ಕ್ರೂಢೀಕರಿಸಿ ಸಿದ್ಧಪಡಿಸಲಾಗುತ್ತದೆ. ಅಕ್ಟೋಬರ್ 29ರಂದು ಸಮಗ್ರ ಕರಡು ಮತದಾರ ಪಟ್ಟಿಯ ಪ್ರಕಟಿಸಲಾಗುತ್ತದೆ.

ಸಾರ್ವಜನಿಕರು ಅಕ್ಟೋಬರ್ 29ರಿಂದ ನವೆಂಬರ್ 28ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಅಂತಿಮವಾಗಿ ಎಲ್ಲಾ 5 ವಿಧಾನಸಭಾ ಕ್ಷೇತ್ರಗಳ ದತ್ತಾಂಶವನ್ನು ಕ್ರೋಢೀಕರಿಸಿ ಆಯೋಗದಿಂದ 2025ರ ಜನವರಿ 6ರಂದು ಅಂತಿಮ ಮತದಾರ ಪಟ್ಟಿಯನ್ನು ಪ್ರಕಟಣೆ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಲು ಫಲಾನುಭವಿಗಳ ಸಲಹೆ : ಮೆಹರೋಜ್ ಖಾನ್

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಕಲಬುರಗಿ ವಿಭಾಗದ ಉಪಾಧ್ಯಕ್ಷರಾದ ಎಸ್.ಆರ್. ಮೆಹರೋಜ್ ಖಾನ್ ಅವರ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ಸಭೆ ಆಗಸ್ಟ್ 28ರಂದು ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜನೆಯಾಗಿದ್ದ ಸಂವಾದಕ್ಕಾಗಿ ಹೊಸಪೇಟೆ,ಹರಪನಹಳ್ಳಿ,ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಕೊಟ್ಟೂರ ಸೇರಿದಂತೆ ಎಲ್ಲಾ ತಾಲೂಕುಗಳಿಂದ ಫಲಾನುಭವಿಗಳು ಆಗಮಿಸಿ ತಮ್ಮ ಅನಿಸಿಕೆಗಳನ್ನು ಸಭೆಗೆ ತಿಳಿಸಿದರು. ಜನರಿಗೆ ಸಾಕಷ್ಟು ಉಪಯುಕ್ತವಾದ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಮುಂದುವರೆಸಬೇಕು ಎಂದು ಸಭೆಯಲ್ಲಿ ಫಲಾನುಭವಿಗಳು ಮನವಿ ಮಾಡಿದರು.

ಗ್ಯಾರಂಟಿ ಯೋಜನೆಯ ಫಲಾನುಭವಿಯಾದ ಮೇಲೆ ನನಗೆ ಧೈರ್ಯ ಬಂದಿದೆ. ಗೃಹಲಕ್ಷ್ಮಿ ಯೋಜನೆಯಿಂದ ಬರುವ ಹಣದಿಂದ ನನ್ನ ಪುತ್ರನನ್ನು ಓದಿಸುತ್ತಿದ್ದೇನೆ ಎಂದು ಶಮಶಾದ್‌ಬೇಗಂ ತಿಳಿಸಿದರು.

ನನ್ನ ಪತ್ನಿ ತೀರಿಕೊಂಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯಿಂದ ಸಿಗುವ 2000 ರೂ ಹಣದಿಂದ ಮೂರು ಹೊತ್ತು ಊಟ ಮಾಡುತ್ತಿದ್ದೇನೆ. ಔಷಧಿ ಪಡೆಯಲು ಅನುಕೂಲವಾಗಿದೆ ಎಂದು ಹೇಳುತ್ತ ಜಯಮ್ಮ ಭಾವುಕರಾದರು. ರಾಜ್ಯ ಸರ್ಕಾರಕ್ಕೆ ಅಭಿನಂದನೆ ತಿಳಿಸಿದರು.

ನನಗೆ ಆರೋಗ್ಯ ಸಮಸ್ಯೆಯಾಗಿತ್ತು. ಗೃಹಲಕ್ಷ್ಮಿಯ 2000 ರೂ. ದಿಂದ ಔಷಧಿ ಪಡೆಯುತ್ತಿದ್ದೇನೆ. ನನ್ನ ಪುತ್ರನ ಶಾಲಾ ಪ್ರವೇಶಾತಿ ಶುಲ್ಕ ಕಟ್ಟಲು ಅನುಕೂಲವಾಗಿದೆ ಎಂದು ಹೇಳುತ್ತ ನಯನಾ ಕೆಲಹೊತ್ತು ಮೌನವಾದರು. ಈ ಯೋಜನೆಯನ್ನು ಮುಂದುವರೆಸಿರಿ ಸಲಹೆ ಮಾಡಿದರು.

ನನ್ನ ಗಂಡನಿಗೆ ಕೆಲಸ ಸಿಗದೆ ತೊಂದರೆಯಾಗಿತ್ತು. ಮನೆಯಲ್ಲಿ ಗ್ಯಾಸ್ ಇರಲಿಲ್ಲ. ರೇಷನ್ ಇರಲಿಲ್ಲ. ಗೃಹಲಕ್ಷ್ಮಿ ಯೋಜನೆಯ ಸಹಾಯಧನದಿಂದ ಸಾಕಷ್ಟು ಅನುಕೂಲವಾಗಿದೆ. ಇದನ್ನು ಮುಂದುವರೆಸಬೇಕು ಎಂದು ಶ್ವೇತಾ ಮನವಿ ಮಾಡಿದರು.

ಪ್ರತಿ ಮಾಹೆ 1050 ನೀಡಿ ಮರಿಯಮ್ಮನಹಳ್ಳಿಯಿಂದ ಹೊಸಪೇಟೆಗೆ ಬಂದು ಕೆಲಸ ಮಾಡುತ್ತಿದ್ದೆ. ಶಕ್ತಿ ಯೋಜನೆಯಿಂದ ಈಗ ಪ್ರತಿ ದಿನ ಉಚಿತವಾಗಿ ಪ್ರಯಾಣಿಸುತ್ತಿದ್ದೇನೆ. 1050 ರೂ ಉಳಿತಾಯವಾಗಿ ಆ ಹಣದಿಂದ ಮಗನಿಗೆ ಸಾಯಿನ್ಸ್ ಓದಿಸುತ್ತಿದ್ದೇನೆ. ಶಕ್ತಿ ಯೋಜನೆಯನ್ನು ಮುಂದುವರೆಸಬೇಕು ಎಂದು ಯಮನಮ್ಮ ಮನವಿ ಮಾಡಿದರು.



ಪ್ಯಾಕ್ಟರಿ ಸೇರಿದಂತೆ ವಿವಿಧೆಡೆ ಕೆಲಸ ಮಾಡುವ ಮಹಿಳೆಯರಿಗೆ ಶಕ್ತಿ ಯೋಜನೆಯಿಂದ ಅನುಕೂಲವಾಗಿದೆ ಎಂದು ಜನವಾದಿ ಮಹಿಳಾ ಸಂಘಟನೆಯ ಹುಲಿಗೆಮ್ಮ ತಿಳಿಸಿದರು.

ಪ್ರತಿ ಮಾಹೆ 650 ರೂ ಕೊಟ್ಟು ನವೀಕರಿಸಿ ಅಡ್ಡಾಡುವುದು ಇದೀಗ ತಪ್ಪಿದೆ. ಶಕ್ತಿ ಯೋಜನೆಯಿಂದ ಅನುಕೂಲವಾಗಿದೆಎಂದು ಹಗರಿಬೊಮ್ಮನಹಳ್ಳಿ ರೇಣುಕ ತಿಳಿಸಿದರು.

ಗೃಹಜ್ಯೋತಿ ಯೋಜನೆಯಿಂದ ಪ್ರತಿ ಮಾಹೆ 1600 ರೂ. ದಂತೆ ವರ್ಷಕ್ಕೆ 25 ಸಾವಿರ ರೂ ಉಳಿಯುತ್ತಿದೆ. ಇದರಿಂದ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಮತ್ತು ಮನೆಗೆ ಕಿರಾಣಿ ಮಾಡುವುದು ಸೇರಿದಂತೆ ಸಾಕಷ್ಟು ಅನುಕೂಲವಾಗಿದೆ ಎಂದು ನಿವೃತ್ತ ನೌಕರ ಅಮರೇಶ ಅವರು ತಿಳಿಸಿದರು.

ಅನ್ನಭಾಗ್ಯ ಯೋಜನೆಯಿಂದ ನಮಗೆ ಸಾಕಷ್ಟು ಅನುಕೂಲವಾಗಿದೆ ಎಂದು ದತ್ತಾತ್ರೆಯ ಭಟ್ ಅವರು ಹೇಳಿದರು.

ಯುವನಿಧಿಯಿಂದ ಬರುವ ಸಹಾಯಧನದಿಂದ ಸ್ಪರ್ಧಾತ್ಮಕ ಪರೀಕ್ಷೆ ಕಟ್ಟಲು, ಪುಸ್ತಕ ಪಡೆಯಲು, ಎಲ್‌ಎಲ್‌ಬಿ ಮಾಡಲು ಅನುಕೂಲವಾಗಿದೆ. ಈ ಯೋಜನೆ ಮುಂದುವರೆಸಬೇಕು ಎಂದು ಬಿಕಾಂ ಪದವೀಧರ ಸಂದೀಪಕುಮಾರ ಸಲಹೆ ಮಾಡಿದರು.

ನಾನು ಪದವಿ ಮುಗಿಸಿರುವೆ. ಯುವನಿಧಿಯಿಂದ ಬರುವ ಹಣದಿಂದ ಬೆಂಗಳೂರು ಸೇರಿದಂತೆ ವಿವಿಧೆಡೆ ಸುತ್ತಿ ಸಂದರ್ಶನ ಕೊಡುತ್ತಿದ್ದೇನೆ. ಡಿಡಿ ತುಂಬಲು ಅನುಕೂಲವಾಗಿದೆ ಎಂದು ಗಾದಿಗನೂರಿನ ಸಂತೋಷ ಕುಮಾರ ಯುವನಿಧಿ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

5 ಗ್ಯಾರಂಟಿ ಯೋಜನೆಗಳು ನಿಜವಾಗಿ ಜನಪರವಾಗಿವೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ತಿಳಿಸುತ್ತೇನೆ. ಎಲ್ಲ ಯೋಜನೆಗಳನ್ನು ಮುಂದುವರೆಸಬೇಕು ಎಂದು ಗ್ಯಾರಂಟಿ ಯೋಜನೆಯ ಫಲಾನುಭವಿ ಸಭೆಗೆ ಸಲಹೆ ಮಾಡಿದರು.

ಸಬಲೀಕರಣ ಮಾಡಲು ಕೊಡುತ್ತಿದ್ದೇವೆ: ಗ್ಯಾರಂಟಿ ಯೋಜನೆಯ ಫಲಾನುಭವಿಗಳೊಂದಿಗೆ ಸಂವಾದ ನಡೆಸುವ ವೇಳೆ ಮಾತನಾಡಿದ ಉಪಾಧ್ಯಕ್ಷರು, ಜನಪರ ಸರ್ಕಾರ ನಮ್ಮದು. 53 ಸಾವಿರ ಕೋಟಿ ರೂ ಹಣವನ್ನು ಬಡವರಿಗೆ ವಿನಿಯೋಗಿಸಿದ ಉದಾಹರಣೆಗಳು ಇಲ್ಲ. ಆ ಕೆಲಸವನ್ನು ಈಗಿನ ಸರ್ಕಾರವು ಮಾಡುತ್ತಿದೆ. ಈ ಎಲ್ಲ ಯೋಜನೆಗಳಿಂದ ಒಬ್ಬ ಫಲಾನುಭವಿಗೆ ತಿಂಗಳಿಗೆ 8 ಸಾವಿರ ರೂ. ಅದೇ ರೀತಿ ವರ್ಷಕ್ಕೆ ಈ ಯೋಜನೆಗಳಿಂದ 1 ಲಕ್ಷ ರೂ.ಸಿಗುತ್ತದೆ. ಸರ್ಕಾರ ನಮಗೆ ಶಕ್ತಿ ಕೊಡುತ್ತಿದೆ ಎಂದು ಫಲಾನುಭವಿಗಳು ಧೈರ್ಯದಿಂದ ಹೇಳಬೇಕು ಎಂದು ಫಲಾನುಭವಿಗಳಿಗೆ ಸಲಹೆ ಮಾಡಿದರು.

ಸಭೆಯಲ್ಲಿ ಸಿಇಒ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ವಿಜಯನಗರ ಜಿಲ್ಲಾಧ್ಯಕ್ಷ ಕೆ. ಶಿವಮೂರ್ತಿ, ಉಪಾಧ್ಯಕ್ಷ ಕೆ.ಬದಾವಲಿ, ಚಂದ್ರಪ್ಪ ಹುಲಿಕಟ್ಟಿ, ಜಿನಕಲ್ ನಾಗಮಣಿ, ಕೆ.ಎಸ್.ಶಾಂತನಗೌಡ, ಸೊನ್ನದ ಗುರುಬಸವ ರಾಜ, ಸದಸ್ಯ ಭಾಗ್ಯಲಕ್ಷ್ಮಿ ಭರಾಡ, ಸಿ.ಸೋಮಪ್ಪ, ವೆಂಕಟರಾಮ ಡಿ., ಗೋಣೆಪ್ಪ ಕಲ್ಲಹಳ್ಳಿ, ಪ್ರಭಾಕರ, ಎಂ. ದಾದಾಪೀರ್, ಜಿಲನ್, ಟಿ.ಉಮೇಶ, ಜಿ.ಬಸವರಾಜ್, ಎಲ್ ಚಂದ್ರನಾಯ್ಕ್, ಮಂಜುನಾಥ, ಗುರುವಿನ ರವೀಂದ್ರ, ಯು.ಬಾಬುವಾಲಿ, ದೇವರಾಜ್ ಪಿ.ಎಚ್., ಪರಶುರಾಮ್ ಸೇರಿದಂತೆ ಇತರರು ಇದ್ದರು. ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ಜೆ.ಎಂ.ಅನ್ನದಾನಸ್ವಾಮಿ ಅವರು ಕಾರ್ಯಕ್ರಮ ನಿರ್ವಹಿಸಿದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ಅಧ್ಯಾಯ 6. ನಿಯಂತ್ರಣ ಮತ್ತು ಸಹಭಾಗಿತ್ವ

1. ನರಕೋಶದಲ್ಲಿ ವಿದ್ಯುತ್ ಆವೇಗವು ಚಲಿಸುವ ಸರಿಯಾದ ಮಾರ್ಗವನ್ನು ಬರೆಯಿರಿ. Apr-2019,Sep-2021

ಉತ್ತರ : ಡೆಂಡ್ರೈಟ್ → ಕೋಶಕಾಯ → ಅಕ್ಸಾನ್ → ನರತುದಿ

2. ಹಾವನ್ನು ಕಂಡ ಒಬ್ಬ ವಿದ್ಯಾರ್ಥಿಯು ಹೆದರಿದ್ದಾನೆ. ಅವನು ಈ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗುವಂತೆ ಮಾಡುವ ಪ್ರಕ್ರಿಯೆಯನ್ನು ವಿವರಿಸಿ.

ಉತ್ತರ : ಈ ಪರಿಸ್ಥಿಯನ್ನು ಎದುರಿಸಲು ದೇಹದಲ್ಲಿ ಅಡ್ರಿನಾಲಿನ್ ಎಂಬ ಹಾರ್ಮೋನ್ ಸ್ರವಿಸಲ್ಪಡುತ್ತದೆ. ಇದರ ಪರಿಣಾಮದಿಂದಾಗಿ ಪಕ್ಕೆಲುಬಿನ ಸ್ನಾಯುಗಳು ಹಾಗೂ ವಪೆಯ ಸಂಕೋಚನೆಯಿಂದ ಉಸಿರಾಟದ ವೇಗ ಹೆಚ್ಚಾಗುತ್ತದೆ. ಅವನು ಈ ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗುವಂತೆ ಮಾಡುತ್ತದೆ.

3. ಪರಾವರ್ತಿತ ಆವೇಗವು ಸಾಗುವ ಸರಿಯಾದ ಮಾರ್ಗವನ್ನು ಬರೆಯಿರಿ. Mar-2023

ಅಥವಾ

"ಗೊತ್ತಾಗದೆ ಮುಳ್ಳಿನ ಮೇಲೆ ಕಾಲಿಟ್ಟಾಗ ನಮ್ಮ ಕಾಲನ್ನು ಹಿಂದಕ್ಕೆ ಎಳೆದುಕೊಳ್ಳುತ್ತೇವೆ" ಈ ಕ್ರಿಯೆಯಲ್ಲಿ ಜರಗುವ ಘಟನೆಗಳನ್ನು ಕ್ರಮಾನುಗತವಾಗಿ ಬರೆಯಿರಿ.

ಉತ್ತರ : ಗ್ರಾಹಕ → ಜ್ಞಾನವಾಹಿ ನರಕೋಶ → ಮಿದುಳು ಬಳ್ಳಿ → ಸಂಬಂಧ ಕಲ್ಪಿಸುವ ನರಕೋಶ → ಕ್ರಿಯಾವಾಹಿ ನರಕೋಶ→ ಕಾರ್ಯ ನಿರ್ವಾಹಕ


(2 ಅಂಕದ ಪ್ರಶ್ನೆಗಳು)

1. ಪ್ರಾಣಿಗಳಲ್ಲಿ ರಾಸಾಯನಿಕ ಸಂವಹನದ ಅಗತ್ಯವನ್ನು ವಿವರಿಸಿ.

ಉತ್ತರ : • ಪ್ರಾಣಿಗಳ ದೇಹದಲ್ಲಿ ವಿದ್ಯುತ್ ಆವೇಗಗಳು ನರ ಅಂಗಾಂಶಗಳಿಂದ ಸಂಪರ್ಕ ಹೊಂದಿದ ಜೀವಕೋಶಗಳನ್ನು ಮಾತ್ರ ತಲುಪುತ್ತದೆ. ಆದರೆ, ಪ್ರತಿಯೊಂದು ಜೀವಕೋಶವನ್ನಲ್ಲ,

• ನರಕೋಶಗಳು ನಿರಂತರವಾಗಿ ವಿದ್ಯುತ್ ಆವೇಗಗಳನ್ನು ಸೃಷ್ಟಿಸಿ ಸಂವಹನ ಸಾಧಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಂದು ಜೀವಕೋಶಗಳಿಗೂ ಅಗತ್ಯ ಸಂವೇದನೆಗಳನ್ನು ನಿರಂತರವಾಗಿ ಸಾಗಿಸಲು ರಾಸಾಯನಿಕ ಸಂವಹನ ಅವಶ್ಯಕ.

2. ಮಾನವನ ಮಿದುಳಿನ ನೀಳಛೇದ ನೋಟ ತೋರಿಸುವ ಚಿತ್ರಬರೆದು ಭಾಗಗಳನ್ನು ಗುರುತಿಸಿ. Sep-2020,Apr/Jun-2022,Mar/Jun-2023,Aug-24




5. ಈ ಕೆಳಗಿನ ಸಸ್ಯ ಹಾರ್ಮೋನ್‌ಗಳನ್ನು ಹೆಸರಿಸಿ ಅವುಗಳ ಕಾರ್ಯ ತಿಳಿಸಿ.

1. ಆಕ್ಸಿನ್ 2. ಸೈಟೋಕೈನಿನ್ 3. ಅಬ್ಸಿಸಿಕ್ ಆಮ್ಲ 4. ಜಿಬ್ಬರ್ ಲಿನ್


ಉತ್ತರ : 1. ಆಕ್ಸಿನ್ – ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ.
2. ಸೈಟೋಕೈನಿನ್ – ಹಣ್ಣು ಮತ್ತು ಬೀಜಗಳಲ್ಲಿ ಕೋಶವಿಭಜನೆಯನ್ನು ಉತ್ತೇಜಿಸುತ್ತದೆ.
3. ಅಬ್ಸಿಸಿಕ್ ಆಮ್ಲ – ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ.
4. ಜಿಬ್ಬರ್ ಲಿನ್ – ಕಾಂಡದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

4. ಈ ಕೆಳಗಿನ ಕ್ರಿಯೆಗಳು ಹೇಗೆ ನಿಯಂತ್ರಿಸಲ್ಪಡುತ್ತವೆ. ಪ್ರತಿಯೊಂದಕ್ಕು ಉದಾಹರಣೆ ತಿಳಿಸಿ.?

ಉತ್ತರ : a. ಐಚ್ಛಿಕ ಕ್ರಿಯೆ – ಮುಮ್ಮೆದುಳಿನಿಂದ ನಿಯಂತ್ರಿಸಲ್ಪಡುತ್ತದೆ.
ಉದಾ : ಕಾರ್ಯಕ್ರಮದ ಕೊನೆಯಲ್ಲಿ ಚಪ್ಪಾಳೆ ತಟ್ಟುವುದು
b. ಅನೈಚ್ಛಿಕ ಕ್ರಿಯೆ – ಹಿಮ್ಮೆದುಳುನಿಂದ ನಿಯಂತ್ರಿಸಲ್ಪಡುತ್ತದೆ.
ಉದಾ: ಏರುಪೇರಾಗುತ್ತಿರುವ ರಕ್ತದ ಒತ್ತಡ

c. ಪರಾವರ್ತಿತ ಪ್ರತಿಕ್ರಿಯೆಗಳು : ಮಿದುಳು ಬಳ್ಳಿಯಿಂದ ನಿಯಂತ್ರಿಸಲ್ಪಡುತ್ತವೆ.
ಉದಾ : 1.ಬಿಸಿಯಾದ ವಸ್ತುವನ್ನು ಮುಟ್ಟಿದಾಗ ಕೈಯನ್ನು ಹಿಂದಕ್ಕೆ ಎಳೆದುಕೊಳ್ಳುವುದು.
2. ಗೊತ್ತಾಗದೆ ಮುಳ್ಳಿನ ಮೇಲೆ ಕಾಲಿಟ್ಟಾಗ ನಮ್ಮ ಕಾಲನ್ನು ಹಿಂದಕ್ಕೆ ಎಳೆದುಕೊಳ್ಳುವುದು.

3. ನ್ಯೂರಾನ್ ಚಿತ್ರ ಬಿಡಿಸಿ, ಭಾಗಗಳನ್ನು ಗುರುತಿಸಿ ರಚನೆಯನ್ನು ವಿವರಿಸಿ.(Apr-2019)




ಉತ್ತರ : ಕೋಶಕೇಂದ್ರ ಹೊಂದಿರುವ ಭಾಗವೇ ಕೋಶಕಾಯ.

ಕೋಶಕಾಯದಿಂದ ಹೊರಟಿರುವ ರಚನೆಗಳು ಡೆಂಡ್ರೈಟ್ ಗಳು. ಇವು ಮಾಹಿತಿಯನ್ನು ಸ್ವೀಕರಿಸಿ ರಾಸಾಯನಿಕ ಕ್ರಿಯೆಯಿಂದ ವಿದ್ಯುತ್ ಆವೇಗವನ್ನು ಸೃಷ್ಟಿಸುತ್ತವೆ.

ಕೋಶಕಾಯದಿಂದ ಹೊರಟಿರುವ ಉದ್ದವಾದ ರಚನೆಯೇ ಆಕ್ಸಾನ್. ಇದು ಮಯಲಿನ್ ಎಂಬ ಹೊದಿಕೆಯನ್ನು ಹೊಂದಿದ್ದು ವಿದ್ಯುತ್ ಆವೇಗವನ್ನು ನರತುದಿಯವರೆಗೂ ಸಾಗಿಸುತ್ತದೆ.

ನರ ತುದಿಯಲ್ಲಿ ವಿದ್ಯುತ್ ಆವೇಗವು ರಾಸಾಯನಿಕ ಸಂಕೇತಗಳಾಗಿ ಪರಿವರ್ತಿಸಿ ಮುಂದಿನ ನರಕೋಶದ ಡೆಂಡ್ರೈಟ್‌ಗಳಿಗೆ ಸಂಸರ್ಗದ ಮೂಲಕ ಸಾಗಿಸುತ್ತದೆ.

5. ಈ ಕೆಳಗಿನ ಸಸ್ಯ ಹಾರ್ಮೋನ್‌ಗಳ ಕಾರ್ಯ ತಿಳಿಸಿ

1. ಆಕ್ಸಿನ್ 2. ಸೈಟೋಕೈನಿನ್ 3. ಅಬ್ಸಿಸಿಕ್ ಆಮ್ಲ 4. ಜಿಬ್ಬರ್ ಲಿನ್

ಉತ್ತರ : 1. ಆಕ್ಸಿನ್ – ಜೀವಕೋಶಗಳು ಉದ್ದವಾಗಿ ಬೆಳೆಯಲು ಸಹಾಯ ಮಾಡುತ್ತದೆ.
2. ಸೈಟೋಕೈನಿನ್ – ಹಣ್ಣು ಮತ್ತು ಬೀಜಗಳಲ್ಲಿ ಕೋಶವಿಭಜನೆಯನ್ನು ಉತ್ತೇಜಿಸುತ್ತದೆ.
3. ಅಬ್ಸಿಸಿಕ್ ಆಮ್ಲ – ಸಸ್ಯಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ.
4. ಜಿಬ್ಬರ್ ಲಿನ್ – ಕಾಂಡದ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

(4 ಅಂಕದ ಪ್ರಶ್ನೆಗಳು)

1. ಸಸ್ಯಗಳ ಬೆಳವಣಿಗೆಯಲ್ಲಿ ಉಂಟಾಗುವ ಚಲನೆ/ಅನುವರ್ತನ ಚಲನೆಗಳನ್ನು ಹೆಸರಿಸಿ ಅವುಗಳನ್ನು ನಿರೂಪಿಸಿ.

ಉತ್ತರ : i) ದ್ಯುತಿ ಅನುವರ್ತನೆ : ಎಳೆಯ ಸಸ್ಯದ ಕಾಂಡಗಳು ಬೆಳಕಿನ ಕಡೆಗೆ ಬಾಗುವ ಕ್ರಿಯೆ.

ii) ಗುರುತ್ವಾನುವರ್ತನೆ : ಭೂಮಿಯ ಅಥವಾ ಗುರುತ್ವದ ಸೆಳೆತಕ್ಕೆ ಪ್ರತಿಕ್ರಿಯೆಯಾಗಿ ಬೇರುಗಳ ಕೆಳಮುಖ ಬೆಳವಣಿಗೆ.

iii) ಜಲಾನುವರ್ತನೆ : ನೀರಿನ ಕಡೆಗೆ ಬೇರುಗಳ ಬೆಳವಣಿಗೆ.

iv) ರಾಸಾಯನಿಕಾನುವರ್ತನೆ : ಅಂಡಾಣುಗಳ ಕಡೆಗೆ ಪರಾಗ ನಳಿಕೆಯ ಬೆಳವಣಿಗೆ.

2. ಮಾನವನ ಮಿದುಳಿನ ಈ ಕೆಳಗಿನ ಭಾಗಗಳ ಕಾರ್ಯವನ್ನು ಬರೆಯಿರಿ.

1. ಮುಮ್ಮೆದಳು :
a. ಮಹಾಮಸ್ತಿಷ್ಕ : ಜ್ಞಾಪಕ ಶಕ್ತಿ, ಬುದ್ಧಿಶಕ್ತಿ, ಕಲ್ಪನೆ, ಭಾವನೆ, ವಿವೇಚನೆ, ಇಚ್ಛಾಶಕ್ತಿ ಐಚ್ಛಿಕ ಸ್ನಾಯುಗಳ ಚಲನೆಯನ್ನು ನಿಯಂತ್ರಿಸುತ್ತದೆ.
b. ಡೈಎನ್ ಸೆಫಲಾನ್ : ದೇಹದ ಉಷ್ಣತೆ, ನೀರಿನ ಸಮತೋಲನ, ಹಸಿವು ಮತ್ತು ನಿದ್ರೆಯನ್ನು ನಿಯಂತ್ರಿಸುತ್ತದೆ.

2. ಮಧ್ಯಮಿದಳು : ಮುಮ್ಮೆದುಳು ಮತ್ತು ಹಿಮ್ಮೆದುಳಿಗೆ ಸಂಪರ್ಕ ಕೊಂಡಿ ಯಾಗಿದೆ.
* ದೇಹದ ಅನೈಚ್ಛಿಕ ಕ್ರಿಯೆಗಳನ್ನು ನಿಯಂತ್ರಿಸುತ್ತದೆ.

3. ಹಿಮ್ಮೆದುಳು :
a. ಅನುಮಸ್ತಿಷ್ಕ : ಮೆದುಳಿನ ದೊಡ್ಡ ಭಾಗ. ಇದು ದೇಹದ ಸಮತೋಲನವನ್ನು ಕಾಪಾಡುತ್ತದೆ.
b. ಪಾನ್ಸ್ : ಮುಖದ ಭಾವನೆಗಳು, ಉಸಿರಾಟ ಕ್ರಿಯೆ, ಆಹಾರ ಅಗಿಯುವುದನ್ನು ನಿಯಂತ್ರಿಸುತ್ತದೆ.
c. ಮೆಡುಲ್ಲಾ : ಅನೈಚ್ಛಿಕ ಕ್ರಿಯೆಗಳಾದ ರಕ್ತದ ಒತ್ತಡ, ಬಾಯಲ್ಲಿ ನೀರೂರುವಿಕೆ, ನುಂಗುವುದು, ವಾಂತಿ ಇವುಗಳನ್ನು ನಿಯಂತ್ರಿಸುತ್ತದೆ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

**ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055